ಕೊಡಗು ಸಂಗಾತಿ

ಸಂಪಾದಕಿ : ಪಟ್ಟಡ ಶೀಲಾಮಣಿ
ಕನ್ನಡ ಮತ್ತು ಗೌಡ ಕನ್ನಡದ ಏಕೈಕ ಪಾಕ್ಷಿಕ ಪತ್ರಿಕೆ

K.R.N.N. 240 ಸಂಪುಟ : 1 ಸಂಚಿಕೆ : 16 ನವಂಬರ್ 15 ರಿಂದ 30–1997 ಪುಟಗಳು : 24 ರೂ. 5



ಮೇರಾ ಭಾರತ್ ಮಹಾನ್

ಚಾಚ ಬಂದ ಚಾಚ—ಮುದ್ದಿನ ಮಕ್ಕಳ ಚಾಚ

ಕೊಡಗು ಸಂಗಾತಿ

ಸಂಪಾದಕಿ, ಪ್ರಕಾಶಕಿ :
ಪಟ್ಟಡ ಪಿ. ಶೀಲಾಮಣಿ

ಉಪ ಸಂಪಾದಕ :
ಕಟ್ರತನ ಸಿ. ಜಯರಾಂ

ಸಹ ಸಂಪಾದಕ :
ಹುಲಿಮನೆ ರಮೇಶ್

ವರದಿಗಾರ :
ಪಟ್ಟಡ ಎಲ್. ಶಿವಕುಮಾರ್

ಕಾರ್ಯ ನಿರ್ವಾಹಕಿ :
ಕು॥ ಗೀತಾ ಮೋಂಟಡ್ಕ

ಪತ್ರಿಕಾ ಪ್ರತಿನಿಧಿ :
ಕು॥ ಧನು ಚೆರಿಯಮನೆ

ಕಛೇರಿ ನಿರ್ವಹಣೆ :
ಪಟ್ಟಡ ಪಿ. ದೀಪಕ್
ಹೊಸೊಕ್ಲು ಹರಿಣಿ ಬೆಳ್ಯಪ್ಪ
ಮುಣ್ಣಾಪುರ ಧರಣಿ ಗಣಪತಿ

ಮುದ್ರಕರು :
ಮುಣ್ಣಂಡ್ರ ಕೆ. ತಮ್ಮಯ್ಯ
ಆಶೀರ್ವಾದ್ ಪ್ರಿಂಟರ್ಸ್,

ಗೌರವ ಸಂಪಾದಕ :
ಪಟ್ಟಡ ಎಂ. ಪ್ರಭಾಕರ್

ಚಂದಾ ಕಳುಹಿಸುವ ಮತ್ತು
ಜಾಹೀರಾತು ಪ್ರಸಾರ ಕಛೇರಿ :

ಕೊಡಗು ಸಂಗಾತಿ
ನಂ. 322, ಹಿನಕಲ್ ಗ್ರಾಮ ಮತ್ತು
ಅಂಚೆ [ಅರಳಿಕಟ್ಟೆ ಹತ್ತಿರ]
ಮೈಸೂರು–570 017.
ದೂರವಾಣಿ : **0821–516771**

ಒಳನೋಟ

ಪುಟಗಳು

ಅರೆ ಭಾಷಿಕ ವಿಭಾಗ

ಚಂದಾ ವಿವರ

ಬಿಡಿ ಪ್ರತಿ	:	**5 ರೂ.**
ಅರ್ಧ ವಾರ್ಷಿಕ	:	**60 ರೂ.**
ವಾರ್ಷಿಕ ಚಂದಾ	:	**120 ರೂ.**

ಸಂಪಾದಕೀಯ

ಹಿಡಿತವಿಲ್ಲದ ವಲಸೆ

‘ಕೈ ಕೆಸರಾದರೆ ಬಾಯಿ ಮೊಸರು” ಗಾದೆ ಕೊಡಗು ಜಿಲ್ಲೆಗೆ ಹೋಲುತ್ತದೆ. ಏಕೆಂದರೆ ಇಲ್ಲಿ ಕಾರ್ಖಾನೆಗಳಿಗಿಂತ ಜಮೀನುಗಳಿಗೆ ಪ್ರಾಮುಖ್ಯತೆ ಇದೆ. ನಮ್ಮ ಜನ ಜಮ್ಮುವನ್ನು ನಂಬಿದ್ದಾರೆ.

ಕೊಡಗು ಜಿಲ್ಲೆ ಇಂದು ವಲಸಿಗರ ನಾಡಾಗುತ್ತದೆ. ಇಲ್ಲಿ ಜಮ್ಮ ಜನ ತಮ್ಮ ಹಿಡುವಳಿಯನ್ನು ಬಿಟ್ಟು ಅಥವ ಮಾರಿ ಪಟ್ಟಣ ಸೇರುತ್ತಿದ್ದಾರೆ. ಕೊಡಗು ಜಿಲ್ಲೆಯನ್ನು ಮರೆಯುತ್ತಿದ್ಧಾರೆ, ಹೀಗಾಗಬಾರದು. ಜಿಲ್ಲೆಯ “ಕರ್ನಾಟಕ ಹಣಕಾಸು ನಿಗಮ”, “ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ”, “ರಾಜ್ಯ ಕೈಗಾರಿಕೆಗಳ ಬಂಡವಾಳ ಅಭಿವೃದ್ಧಿ ನಿಗಮಗಳು”, ಬ್ಯಾಂಕುಗಳು ನೀಡುತ್ತಿರುವ ಹಣಕಾಸಿನ ನೆರವಿನ ಸಿಂಹಪಾಲು ವಲಸಿಗರ ಪಾಲಾಗುತ್ತಿದೆ. ಈ ನೆಲದ ಬಂಡವಾಳ, ನೀರು, ಜಮೀನು ವಿದ್ಯುತ್ ಚ್ಛಕ್ತಿಯನ್ನು ಬಳಸಿಕೊಳ್ಳುತ್ತಿರುವ ವಲಸಿಗರು ಸ್ಥಳೀಯ ಸಂಪನ್ಮೂಲಗಳ ಒಡೆಯರಾಗಿ ಸಿರಿವಂತರಾಗಿದ್ದಾರೆ. ನಮ್ಮ ಜನ ಇಂದು ಅವರ ಅಡಿಯಲ್ಲಿ ಕೂಲಿ ಮಾಡುವ ಮಟ್ಟ ತಲುಪುತ್ತಿದೆ. ಇದು ಶೋಚನೀಯ ಮಟ್ಟವನ್ನು ತಲುಪುತ್ತಿದೆ. ಮೇಲಿನ ಕೈಗಾರಿಕಾ ಸಹಕಾರ ಸಂಸ್ಥೆಗಳು ಈವರೆಗೆ ಎಷ್ಟು ಮಂದಿ ಕನ್ನಡಿಗರಿಗೆ ಉದ್ಯೋಗ ನೀಡಿದೆ ಎಂದು ನೋಡಿದಾಗ ಅದರ ಮಟ್ಟ ಬಹಳ ಕಡಿಮೆ ಇದೆ. ಕೊಡಗಿನ ಜನ ಇಂದು ಪಟ್ಟಣ ಸೇರಲು ಹಂಬಲಿಸುತ್ತಿದ್ದಾರೆ. ತಮ್ಮ ಸಂಸ್ಕಾರ, ಸಂಸ್ಕೃತಿ, ಆಟ–ಪಾಠಗಳು ಹದಗೆಡುತ್ತಿದೆ. ಸಹಬಾಳತ್ವ ಕೆಳಮಟ್ಟದಲ್ಲಿದೆ. ಕನ್ನಡಿಗರು ಅಲ್ಪ ಸಂಖ್ಯಾತರಾಗುವ ಲಕ್ಷಣಗಳು ಎದ್ದು ಕಾಣುತ್ತಿದೆ. ಈ ನಿಟ್ಟಿನಲ್ಲಿ ಯುವಕ ಯುವತಿಯರು ಶ್ರಮ ಜೀವಿಗಳಾಗಿ ಬದುಕು ನಡೆಸಲು ಮುಂದಾದಲ್ಲಿ ಇದನ್ನು ತಡೆಗಟ್ಟಲು ಸಾಧ್ಯ. ಜಿಲ್ಲೆಗೆ ಹಬ್ಬುತ್ತಿರುವ ವಲಸಿಗರ ವಿಷ ಬೀಜವನ್ನು ತಡೆಗಟ್ಟುವ ಕ್ರಮ ಕೈಗೊಳ್ಳದಿದ್ದರೆ ಮುಂದೊಂದು ದಿನ ಕೊಡಗು ಜಿಲ್ಲೆಯ ನೊಂದ ಕನ್ನಡಿಗರಿಂದ ಹೋರಾಟ ನಡೆದರೆ ಆಶ್ಚರ್ಯವೇನಿಲ್ಲ.

ನಮ್ಮ ಜನ ತಮ್ಮ ತೋಟಗಳಿಗೆ ಮಾತ್ರ ಬದ್ರ ಬೇಲಿ ಹಾಕಿಕೊಳ್ಳದೆ ಇಡೀ ಕೊಡಗು ಜಿಲ್ಲೆಗೆ ಬದ್ರ ಬೇಲಿ ಹಾಕಿ ನಮ್ಮ ಸಂಸ್ಕೃತಿ ಉಳಿಸಿ ಕೊಳ್ಳುವರೆ ? ಕಾದು ನೋಡಬೇಕಿದೆ.

ಮಡಿಕೇರಿಯಲ್ಲಿ ಅಪ್ಪಯ್ಯ ಗೌಡ್ರ ಸ್ಮಾರಕ ಸ್ಥಾಪನೆಗೆ ಮನವಿ

ಕೊಡಗಿನ ಸ್ವಾತಂತ್ರ್ಯ ಹೋರಾಟಗಾರ ಹುತಾತ್ಮ ಗುಡ್ಡೆಮನೆ ಅಪ್ಪಯ್ಯಗೌಡ ಅವರ ಪ್ರತಿಮೆಯನ್ನು ಮಡಿಕೇರಿ ನಗರದಲ್ಲಿ ಅನಾವರಣಗೊಳಿಸಬೇಕೆಂದು ‘ಸ್ವಾತಂತ್ರ ವೀರಯೋಧ ಸುಬೆದಾರ್ ಅಪ್ಪಯ್ಯಗೌಡ್ರ ಸಂಸ್ಮರಣಾ ಸಮಿತಿಯು ಜಿಲ್ಲಾಧಿಕಾರಿಯವರಿಗೆ ಮನವಿ ಮಾಡಿಕೊಂಡಿದೆ.


ಅಕ್ಟೋಬರ್ 31ರಂದು ನಗರದಲ್ಲಿ ನಡೆದ ಮಹಾತ್ಮರ ದಿನಾಚರಣೆ ಸಂದರ್ಭದಲ್ಲಿ ಸಮಿತಿಯ ನಿಯೋಗವೊಂದು ಜಿಲ್ಲಾಧಿಕಾರಿ ಡಿ. ಎಸ್. ಅಶ್ವಥ್ ಅವರಿಗೆ ಈ ಸಂಬಂದ ಮನವಿ ಅರ್ಪಿಸಿದ್ದು, 1837ರ ಅಕ್ಟೋಬರ್ 31ರಂದು ಬ್ರಿಟೇಷರ ವಿರುದ್ಧ ಹೋರಾಡಿ ಇಲ್ಲಿನ ಕೋಟೆ ಮುಂಭಾಗ ಗಲ್ಲಿಗೇರಿಸಲ್ಪಟ್ಟ ಅಪ್ಪಯ್ಯಗೌಡ ಅವರ ಸ್ಮಾರಕ ನಿರ್ಮಾಣ ಅಗತ್ಯವೆಂದು ಅಭಿಪ್ರಾಯ ಪಟ್ಟಿತು.

ಅಲ್ಲದೆ ಅಮರ ಸುಳ್ಯ ರೈತ ದಂಗೆಯಲ್ಲಿ ಪಾಲ್ಗೊಂಡು ಹುತಾತ್ಮರಾದ ಇತರ 13 ಮಂದಿ ವಿರಾದಾನಿಗಳ ಹೆಸರನ್ನು ಸಹ ಅಪ್ಪಯ್ಯಗೌಡ್ರ ಸ್ಮಾರಕದಲ್ಲಿ ಕೆತ್ತಿಸಬೇಕೆಂದು ಆಗ್ರಹಿಸಿರುವ ನಿಯೋಗವು ವರ್ಷಂಪ್ರತಿ ಅಕ್ಟೋಬರ್ 31ರಂದು ಹುತಾತ್ಮ ದಿನವನ್ನಾಗಿ ಆಚರಿಸಬೇಕೆಂಬ ಬೇಡಿಕೆಯನ್ನು ಸಹ ಜಿಲ್ಲಾ ಆಡಳಿತದ ಮುಂದಿರಿಸಿದೆ.

—ಸಂಸ್ಮರಣಾ ಸಮಿತಿ.

ಗೌಡ ಸಂಸ್ಕೃತಿಯ ಸಾರಥ್ಯಕ್ಕೆ ಕಟಿಬದ್ಧರಾಗಿರುವ ಕುಯ್ಯಮುಡಿ ಕಾಳಪ್ಪ ಪೂರ್ಣಯ್ಯ

ಕೊಡಗಿನಲ್ಲಿ ಗೌಡ ಜನಾಂಗ ಮೇಳೈಸಲು, ಸಂಘಟನೆಯು ಬೇರೂರಲು, ಸಂಸ್ಕೃತಿಯ ರಕ್ಷಣೆಗೆ ಅರಿವು, ಗೌಡೆದೆಯ ಹೃದಯಂತರಾಳದಲ್ಲಿ 1908ರಲ್ಲಿ ಮೊಳಕೆಯೊಡೆದು ಪ್ರೇರಣೆಗೈದು ನಾಂದಿ ಹಾಡಿದ ಸಂಘವೇ ಮಡಿಕೇರಿಯ 'ಗೌಡ ವಿದ್ಯಾ ಸಂಘ'. ಜನರ ಬಾಯಲ್ಲಿ ಅದು ಮೇಲಿನ ಗೌಡ ಬೋರ್ಡಿಂಗ್. ಎಲ್ಲಾ ಗೌಡ ಸಮಾಜಗಳ ನಡುವೆ ಶಿರಸ್ತ್ರಾಣದಂತೆ ಶೋಭಿಸುತ್ತಿರುವ ಈ ಸಂಘದ ಇಂದಿನ ಅಧ್ಯಕ್ಷರೇ ಕುಯ್ಯಮುಡಿ ಕಾಳಪ್ಪ ಪೂರ್ಣಯ್ಯ.



ಪೂರ್ಣಯ್ಯ ದಂಪತಿಗಳು

ಕೊಡಗು ಗೌಡ ವಿದ್ಯಾ ಸಂಘದ ರೂಪುರೇಷೆಗಳು, ಜನಾಂಗದ ಏಳಿಗೆಯಲ್ಲಿ ಅದರ ಧ್ಯೇಯೋದ್ದೇಶಗಳನ್ನು ಕುರಿತು ನಮ್ಮ ಓದುಗರಿಗೆ ಮನನಮಾಡಿಕೊಡುವ ಉದ್ದೇಶದಿಂದ "ಕೊಡಗು ಸಂಗಾತಿ"ಯು ಅವರನ್ನು ಸಂದರ್ಶಿಸಿದಾಗ, ಅವರಾಡಿದ ಸಂಯಮದ, ದೂರದೃಷ್ಟಿಭರಿತ ಮಾತುಗಳನ್ನು ನಿಮ್ಮ ಮುಂದಿಡುತ್ತಿದ್ದೇವೆ.

ಕೊಡಗು ಸಂಗಾತಿ : ಓದುಗರಿಗೆ ನಿಮ್ಮ ಪರಿಚಯ ಹೇಳುವಿರಾ ?

ಉತ್ತರ : ನಾನು ಕುಯ್ಯಮುಡಿ ಕಾಳಪ್ಪನವರ ಮಗನಾಗಿ 1942 ಜುಲೈ 20ರಂದು ಜನಿಸಿ, ಮಡಿಕೇರಿಯಲ್ಲಿ ಹೈಸ್ಕೂಲು, ಐಟಿಐ ಕಾಲೇಜು ಶಿಕ್ಷಣವನ್ನು ಪಡೆದೆ. ಮೂರುವರ್ಷಗಳ ಕಾಲ ಎನ್.ಜಿ.ಎಫ್. ನಲ್ಲಿ ಕೆಲಸ ಮಾಡಿ, ಈಗ ವ್ಯಾಪಾರಸ್ಥ (ಬಿಸಿನೆಸ್) ನಾಗಿ ಮಡಿದು ಈಗ ಸುಸ್ಥಿತಿಯಲ್ಲಿದ್ದೇನೆ.

ಕೊ.ಸ. : ಜನ ಸೇವೆಯಲ್ಲಿ ನಿಮ್ಮ ಪಾತ್ರವೇನು ?

ಉ : ನಾನು ಗುಂಡೂರಾವ್‌ರವರ ಪ್ರೇರಣೆಯಿಂದ ಕಾಂಗ್ರೆಸ್ ಪಕ್ಷದ ಸಕ್ರಿಯ ಕಾರ್ಯಕರ್ತನಾಗಿ, ಯುವ ಕಾಂಗ್ರೆಸ್ ಅಧ್ಯಕ್ಷನಾಗಿ, ಮುಂದೆ ಮಡಿಕೇರಿ ನಗರದ ಕೌನ್ಸಿಲರ್ ಆಗಿ, ಕಾರ್ಯನಿರ್ವಹಣಾ ಸಮಿತಿಯ ಸದಸ್ಯನಾಗಿ, ಜನಸೇವೆ ಮಾಡಿದ್ದೇನೆ. ಗೌಡ ಜನಸೇವೆಯ ಬಗ್ಗೆ ಹೇಳಬೇಕೆಂದರೆ, ಚೆರಿಯಮನೆ ಪೊನ್ನಪ್ಪನವರು ಅಧ್ಯಕ್ಷರಾಗಿದ್ದ ಸಮಯದಲ್ಲಿ ವಿದ್ಯಾಸಂಘದ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದೇನೆ. ಮನೆ ಮನೆಗೆ ಹೋಗಿ ಸಂಘದ ಅಭಿವೃದ್ಧಿಗೆ ಹಣ ಸಂಗ್ರಹಿಸಿದ್ದೆ. 1995 ರಿಂದ ಗೌಡ ವಿದ್ಯಾಸಂಘದ ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ.

ಕೊ.ಸಂ. : ನೀವು ಅಧ್ಯಕ್ಷರಾಗುವ ಮೊದಲು ವಿದ್ಯಾ ಸಂಘ ಹೇಗಿತ್ತು ? ನಿಮ್ಮ ಅವಧಿಯಲ್ಲಿ ಸಾಧಿಸಿದ ಪ್ರಗತಿ ಏನು ?

ಉ : ನಮ್ಮ ಹಿರಿಯರು ಬಹಳ ಕೆಲಸ ಮಾಡಿದ್ದಾರೆ. ಗೌಡ ಅಭಿವೃದ್ಧಿಗೆ ಭದ್ರ ಬುನಾದಿಯನ್ನು ಒದಗಿಸಿದ್ದೇ ಗೌಡ ವಿದ್ಯಾ ಸಂಘ ಎನ್ನಬಹುದು. ಅಂದಿನಿಂದ ಇಂದಿನವರೆಗೂ ವಿದ್ಯೆಗೆ ಪ್ರೋತ್ಸಾಹ ನೀಡುತ್ತಾ ಬಂದಿದೆ. ಇಂದು ಹಲವಾರು ಸಮಾಜಗಳು ಹುಟ್ಟಿ ಕಲ್ಯಾಣ ಮಂಟಪಗಳಾಗಿವೆ. ಆದರೆ ಇವುಗಳೆಲ್ಲದಕ್ಕೂ ಕೇಂದ್ರಬಿಂದು ಈ ವಿದ್ಯಾಸಂಘ. ಇದರ ಹಣದಿಂದಲೇ ಕೆಳಗಿನ ಗೌಡ ಸಮಾಜದ ನಿವೇಶನ ಮತ್ತು ಮೈಸೂರಿನ ವಿದ್ಯಾರ್ಥಿ ನಿಲಯದ ನಿವೇಶನಗಳನ್ನು ಕೊಳ್ಳಲಾಯಿತು. ನಾನು ಅಧ್ಯಕ್ಷನಾದ ಮೇಲೆ ಪ್ರತಿಭಾವಂತರಿಗೆ ನೀಡುತ್ತಿದ್ದ ಐದಾರು ಸಾವಿರ ರೂ.ಗಳ ಮೊತ್ತವನ್ನು ಇಪ್ಪತ್ತು ಸಾವಿರ ರೂಪಾಯಿಗಳಿಗೆ ಏರಿಸಲಾಗಿದೆ. ಕಟ್ಟಡದ ಅಭಿವೃದ್ಧಿಗೂ ಗಮನ ಹರಿಸಿ ಬೋರ್‌ವೆಲ್ ಮೂಲಕ ನೀರಿನ ವ್ಯವಸ್ಥೆ, ಮಹಾದ್ವಾರಕ್ಕೆ ಗೇಟಿನ ವ್ಯವಸ್ಥೆಗಳನ್ನು ಕಲ್ಪಿಸಲಾಗಿದೆ

ಕೊ.ಸ. : ಯುವಕರಿಗೆ ನಿಮ್ಮ ಸಂಘವು ಏನಾದರು ಕಾರ್ಯಕ್ರಮ ಹಮ್ಮಿಕೊಂಡಿದೆಯೇ ?

ಉ : ಇತ್ತೀಚೆಗೆ ಸುಳ್ಯದಲ್ಲಿ ಸಮ್ಮೇಳನ ನಡೆದಾಗ ನಾನು ಕೊಡಗಿನ ಪರವಾಗಿ ಕಾರ್ಯಾಧ್ಯಕ್ಷನಾಗಿದ್ದೆ. ಆಗ ಕಾರ್ಯದರ್ಶಿ ಕೋಳುಮುಡಿಯನ ಅನಂತಕುಮಾರ್

ಮತ್ತು ನಿರ್ದೇಶಕ ಪಟ್ಟಡ ಪ್ರಭಾಕರರವರೊಡಗೂಡಿ ಒಂದು ಕಾರ್ಯಕ್ರಮವನ್ನು ನೀಡಿದ್ದೆವು. ಈಗ ಮಡಿಕೇರಿಯಲ್ಲಿ ನಮ್ಮ ಯುವಕ ಯುವತಿಯರಿಂದ ಸಾಂಸ್ಕೃತಿಕ ಸಮ್ಮೇಳನ ನಡೆಸುವ ಆಲೋಚನೆಯಿದೆ ಅದಕ್ಕಾಗಿ ಆಸಕ್ತ ಯುವಕರ ಸಮಿತಿ ರಚಿಸಿ, ಸದ್ಯದಲ್ಲೇ ಕಾರ್ಯಕ್ರಮ ರೂಪಿಸಲಾಗುವುದು. ಈ ಬಗ್ಗೆ ಈಗಾಗಲೇ "ಕೊಡಗು ಸಂಗಾತಿ" ಪತ್ರಿಕೆಯಲ್ಲಿ ಪ್ರಚಾರ ಪಡಿಸಿದೆ.

ಸಂದರ್ಶನ, ಲೇಖನ :

ಪಟ್ಟಡ ಶಿವಕುಮಾರ್

ಕೊ.ಸ. : ಕೊಡಗಿನಲ್ಲಿ 'ಕೊಡಗು ಉತ್ಸವವೂ' ಸೇರಿದಂತೆ ಹಲವು ಕಾರ್ಯಕ್ರಮಗಳು ನಡೆದರೂ ಅಧಿಕ ಸಂಖ್ಯೆಯ ಗೌಡ ಜನಾಂಗದವರ ಗಂದವೇ ಇರಲಿಲ್ಲವಲ್ಲ ಏಕೆ?

ಉ : ಹಲವಾರು ಸಮಾಜಗಳು ಹುಟ್ಟಿಕೊಂಡಿರುವುದರಿಂದ ಅಂತಹ ಚಟುವಟಿಕೆಯನ್ನು ಯಾರು ನಡೆಸಬೇಕೆಂಬ ಸಮಸ್ಯೆಯುಂಟಾಗಿತ್ತು. ಸಮಾಜಗಳು ಆ ಕಾರ್ಯ ಮಾಡಬೇಕೆಂಬ ಭಾವನೆ ನಮ್ಮದಾಗಿತು. ಆದರೆ ಅವರುಗಳು ಮಾಡುವ ಸಾಧ್ಯತೆ ಇಲ್ಲದಿರುವುದರಿಂದ ಇನ್ನೂ ಮುಂದೆ ನಾವೇ ಆ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತೇವೆ. ನಮ್ಮ ಜನಾಂಗವನ್ನು ಯಶಸ್ವಿಯಾಗಿ ಪ್ರತಿನಿಧಿಸುತ್ತೇವೆಂಬ ಭರವಸೆ ನೀಡುತ್ತೇನೆ.

ಕೊ.ಸ. : ಗೌಡ ವಿದ್ಯಾಸಂಘ ಮತ್ತು ಗೌಡ ಸಮಾಜಗಳ ನಡುವಿನ ಸಂಬಂಧ ಹೇಗಿದೆ ?

ಉ : ಎರಡೂ ಬೇರೆ ಬೇರೆ ದಿಕ್ಕಿನಲ್ಲಿ ಕೆಲಸ ಮಾಡುತ್ತಿವೆ. ಆದರೆ ಒಟ್ಟಾಗಿ ಮುನ್ನಡೆಯ ಬೇಕೆಂಬುದು ಹಿರಿಯರ ಅಪೇಕ್ಷೆ. ನಾವು ಮೇಲಿನ ಕಟ್ಟಡದ ಜವಾಬ್ದಾರಿಯೊಡನೆ ವಿದ್ಯಾ ಪ್ರಗತಿಗೆ ಗಮನ ನೀಡುತ್ತಿದ್ದರೆ, ಅವರು ಕೆಳಗಿನ ಸಮಾಜದ ಬಗ್ಗೆ ಕಾಳಜಿ ವಹಿಸುತ್ತಿದ್ದಾರೆ. ಸಂಸ್ಕೃತಿಯ ಬೆಳವಣಿಗೆಯ ವಿಚಾರದಲ್ಲಾದರೂ ಹೊಂದಿಕೊಂಡು ಮುನ್ನೆಡೆದರೆ ಖಂಡಿತಾ ಒಳ್ಳೆಯದಾಗುತ್ತದೆ.

ಕೊ. ಸ : ಕೊಡಗು ಗೌಡ ಮತ್ತು ದ. ಕನ್ನಡ ಗೌಡ ಎನ್ನುವಾಗ ಕೆಲವು ಭಿನ್ನಾಭಿಪ್ರಾಯ ಉಂಟಾಗುತ್ತಿದೆಯೆ ?

ಉ : ಕೊಡಗಿನ ಮತ್ತು ದ. ಕನ್ನಡದ ಸಂಸ್ಕೃತಿಯೇ ಬೇರೆ ಬೇರೆ. ಕೊಡಗಿನಲ್ಲಿ ಕುಪ್ಪಸ ಮತ್ತು ಗೇಂಟೆ ಸೀರೆ ಉಡುವ ಪದ್ಧತಿ ಇದೆ. ನಾವು ನಮ್ಮ ನಮ್ಮ ಸಂಸ್ಕೃತಿಗಳನ್ನು ಕಾಯ್ದುಕೊಂಡು, ಮೇಲೆ 'ಗೌಡ' ಎಂಬ ಪದದ ಕೆಳಗೆ ಪ್ರಾದೇಶಿಕ ಭಿನ್ನತೆಯನ್ನು ಮರೆತು ಸಂಘಟಿತರಾಗಬೇಕೆಂಬುದು ನನ್ನ ಅಭಿಪ್ರಾಯ. ಇದರ ಬಗ್ಗೆ ಶೀಘ್ರವಾಗಿ ನಿರ್ಣಯ ಕೈಗೊಳ್ಳಲಾಗುವುದು.

ಕೊ. ಸ : ಜನ ಸಂಘಟನೆಯಲ್ಲಿ ಗೌಡ ಜನಾಂಗದ ಪ್ರತಿಕ್ರಿಯೆ ಹೇಗಿದೆ ?

ಉ : ಈಗೀಗ ಉತ್ತಮ ಪ್ರತಿಕ್ರಿಯೆ ಕಂಡುಬರುತ್ತಿದೆ. ಹಿಂದೆ ನಮ್ಮ ಜನ ಆರ್ಥಿಕ ಸಂಕಷ್ಟಕ್ಕೊಳಗಾಗಿದ್ದರು. ಈಗ ಅಭಿವೃದ್ಧಿ ಹೊಂದುತ್ತಿದ್ದಾರೆ. ಅವರ ಫಲವಾಗಿ ಸಂಘಟನೆ ಮತ್ತು ಸಂಸ್ಕೃತಿಯ ರಕ್ಷಣೆಯ ಕಡೆಗೆ ಒಲವು ತೋರುತ್ತಿದ್ದಾರೆ.

ಕಲಾಕಾರ ಕಲ್ಲನ್ನು ಹೂವಾಗಿ ಅರಳಿಸಬಲ್ಲ, ಮಡಿಕೇರಿಯಿಂದ ಮೇಕೇರಿ ಕಡೆಗೆ ಸಾಗುವಾಗ ಕಂಡುಬರುವ ಕಡಿದಾದ ಕರಟು–ಒರಟು ಕಂದರವನ್ನೇ ಬಗೆದು ಹಸಿರು ಕಾಫಿಯ ಗರಿಯ ಮೂಡಿಸಿದ ಪೂರ್ಣಯ್ಯನವರು ಹುಟ್ಟನಿಂದ ಶ್ರೀಮಂತರಲ್ಲ. ರಾಜಕಾರಣಿಯಾಗಿ, ಜನಸೇವಕನಾಗಿ ಶ್ರೇಷ್ಠ ವ್ಯಾಪರಸ್ಥನಾಗಿ ಜೀವನ ಸವೆಸಿ, ಬಾಳಿನುದ್ದಕ್ಕೂ ಅನುಸರಿಸಿದ ದೈವಭಕ್ತಿ, ಶ್ರದ್ಧೆಯ ಶ್ರಮದ ಸಾಧನೆಯ ಫಲವೇ ಇಂದಿನ ಶ್ರೀಮಂತಿಕೆ,

ಲಕ್ಕಂಡ್ರ ಅಯ್ಯಪ್ಪನವರ ಮಗಳು ಚಂದ್ರಮ್ಮರನ್ನು ವಿವಾಹವಾಗಿರುವ ಇವರ ಸಂಸಾರಕ್ಕೆ ಮೂವರು ಕಣ್ಮಣಿಗಳು. ಮೊದಲನೆಯ ಮಗಳು ಜ್ಯೋತಿಲಕ್ಷ್ಮಿ ಕಾನೂನು ಪದವಿ ಪಡೆದು, ವಿವಾಹವಾಗಿ ಪತಿಯೊಡನೆ ಅಮೇರಿಕದಲ್ಲಿ ನೆಲೆಸಿದರೆ, ಇನ್ನೊಬ್ಬಳು ಶ್ರೀಲಕ್ಷ್ಮಿ ಹಾಸನದಲ್ಲಿ ಇಂಜಿನಿಯರಿಂಗ್ ಪದವಿ ಪಡೆಯುತ್ತಿದ್ದಾಳೆ. ಕಿರಿಯ ಮಗ ಕುಮಾರವೇಲ 8ನೇ ತರಗತಿಯಲ್ಲಿ ಓದುತ್ತಿದ್ದಾನೆ. ಸದಾ ಹಣೆಯಲ್ಲಿ ಕುಂಕುಮ ಧರಿಸಿ, ನಗುಮುಖದಿಂದ ಮಾತನಾಡುವ ಪೂರ್ಣಯ್ಯನವರ ಮಾತಿನಲ್ಲಿ 'ಗೌಡ ಸಂಸ್ಕೃತಿ'ಯನ್ನು ಅತ್ಯುನ್ನತ ಸ್ಥಾನಕ್ಕೇರಿಸುವ ಇರಾದೆಯಿದೆ. ಅದು ಈಡೇರಲೆಂದು ಜನಾಂಗದ ಪರವಾಗಿ 'ಸಂಗಾತಿ'ಯು ಶುಭಕೋರುತ್ತದೆ. ●

ಯಲಹಂಕದಲ್ಲಿ ಕೈಲ್‌ಮುಹೂರ್ತ ಆಚರಣೆ

ಕೊಡುಗು ಗೌಡ ಮಿತ್ರ ಮಂಡಳಿ, ಯಲಹಂಕ, ಬೆಂಗಳೂರು ಇವರ ಆಶ್ರಯದಲ್ಲಿ ಕೈಲ್ ಮುಹೂರ್ತ ಹಬ್ಬವನ್ನು ತಾ|| 7–9–97ನೇ ಭಾನುವಾರದಂದು ಅಚ್ಚು ಮತ್ತು ಗಾಲಿ ಕಾರ್ಖಾನೆಯ ಮನೋರಂಜನಾ ಕೇಂದ್ರದಲ್ಲಿ ಅಮೆಮನೆ ಶ್ರೀ ಸೋಮಣ್ಣನವರ ಅಧ್ಯಕ್ಷತೆಯಲ್ಲಿ ಸಂಭ್ರಮದಿಂದ ಆಚರಿಸಲಾಯಿತು. ಕಾರ್ಯಕ್ರಮದ ಪ್ರಯುಕ್ತ ಆಟೋಟ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

ಯಲಹಂಕದ ಸುತ್ತಮುತ್ತಲಿರುವ ಸುಮಾರು 40 ಸದಸ್ಯರು ತಮ್ಮ ಕುಟುಂಬ ಸಮೇತ ಹಬ್ಬದಲ್ಲಿ ಹಾಜರಿದ್ದರು.

ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ 1837ರ ಸ್ವಾತಂತ್ರ್ಯ ಸಂಗ್ರಾಮ

[ಹಿಂದಿನ ಸಂಚಿಕೆಯಿಂದ]

ಈ ಕಡೆ ಸುಳ್ಯದಲ್ಲಿ ರಾಮೇಗೌಡರು ಮತ್ತು ಅಣ್ಣೇಗೌಡರು ಗುಟ್ಟಾಗಿ ಸುತ್ತ ಮುತ್ತಲಿನ ಗ್ರಾಮಗಳಲ್ಲಿ ತಿರುಗಾಡಿ ಜನರನ್ನು ಸ್ವಾತಂತ್ರ್ಯ ಸಂಗ್ರಾಮಕ್ಕೆ ಅಣಿಯಾಗಲು ಪ್ರಚಾರ ಕೈಗೊಂಡರು ಸೈನ್ಯದ ಶಿಬಿರಕ್ಕಾಗಿ ಕೆದಂಪಾಡಿ ರಾಮಗೌಡರು ತನ್ನ ಮನೆಯ ಅಂಗಳದಲ್ಲಿಯೇ ಒಂದು ದೊಡ್ಡ ಚಪ್ಪರವನ್ನು ಮಗನ ಮದುವೆ

ಲೇಖಕ : **ಪೂಜಾರಿ ಮೊಣ್ಣಪ್ಪ**

ಎಂಬುದಾಗಿ ಸುದ್ಧಿ ಹರಡಿ ಹಾಕಿಸಿದರು, ಅಲ್ಲದೆ ಕಲ್ಯಾಣ ಸ್ವಾಮಿ ಮತ್ತು ಅವರ ಆಪ್ತರು ಬರುತ್ತಾರೆಂದೂ ಎಲ್ಲರೂ ತಮ್ಮ ತಮ್ಮಲ್ಲಿರುವ ಆಯುಧಗಳೊಡನೆ ಬಂದು ಸೇರಬೇಕೆಂದು ಹೇಳಿದ್ದರು. ಸಾಯಂಕಾಲದ ವೇಳೆಗೆ ಚಪ್ಪರದಡಿಯಲ್ಲಿ ಸೇರಿ ಜನರು ಕಲ್ಯಾಣ ಸ್ವಾಮಿಯ ಆಗಮನವನ್ನು ಕಾಯುತ್ತಿದ್ದರು. ಸಾಯಂಕಾಲವಾಗುವುದರೊಳಗೆ ಕಲ್ಯಾಣ ಸ್ವಾಮಿ ಮತ್ತು ಸಂಗಡಿಗರು ಸುಳ್ಯವನ್ನು ತಲುಪಿದರು. ಬಂದ ಜನರಿಗೆಲ್ಲಾ ಊಟ ಉಪಚಾರವಾದ ನಂತರ ಕಲ್ಯಾಣ ಸ್ವಾಮಿಗೆ ಈ ಹಿಂದೆಯೇ ತಯಾರಿಸಿದ ಒಂದು ಸಿಂಹಾಸನವನ್ನೂ, ಒಂದು ರೇಶ್ಮೆಯ ನಿಲುವಂಗಿಯನ್ನೂ, ಕೆಂಪು ರೇಶ್ಮೆಯ ಅಂಗವಸ್ತ್ರವನ್ನೂ ಕೊಟ್ಟು ಸಿಂಹಾಸನದಲ್ಲಿ ಕೂರಿಸಿ, ಒಂದು ರೇಶ್ಮೆಯ ಕೊಡೆಯನ್ನು ಹಿಡಿಯುವ ಏರ್ಪಾಡನ್ನು ಮಾಡಿದರು. ನಂತರ "ಕಲ್ಯಾಣ ಸ್ವಾಮಿಯವರಿಗೆ ಜಯವಾಗಲಿ" ಕೊಡಗಿನ ರಾಜರಿಗೆ ಜಯವಾಗಲಿ, ಎಂಬ ಜಯಕಾರವನ್ನು ಜನರಿಂದ ಹೇಳಿಸಿ, ಕಲ್ಯಾಣ ಸ್ವಾಮಿಯವರು ಕೊಡಗಿನ ರಾಜರಾದ ಚಿಕ್ಕವೀರ ರಾಜೇಂದ್ರ ಒಡೆಯರು ಕಾಶಿಯಿಂದ ಹಿಂತಿರುಗುವವರೆಗೆ ರಾಜರ ಪರವಾಗಿ ರಾಜ್ಯಪಾಲರು ಕೊಡಗು ಸಂಸ್ಥಾನದ ಆಡಳಿತ ಮಾಡುವರೆಂದೂ ರಾಜರ ಪರವಾಗಿ ಕಲ್ಯಾಣ ಸ್ವಾಮಿಯವರಿಗೆ ಎಲ್ಲಾ ರೀತಿಯ ರಾಜಮರ್ಯಾದೆಯನ್ನೂ ಮತ್ತು ರಾಜಭಕ್ತಿಯನ್ನೂ ತೋರಿಸಬೇಕೆಂದು ಹೇಳಿದರು. ನಂತರ ಕಲ್ಯಾಣ ಸ್ವಾಮಿಯವರು ಕೆದಂಪಾಡಿ ರಾಮಗೌಡರ ಮತ್ತು ಹುಲಿಕುಂದ ನಂಜಯ್ಯನವರನ್ನು ದಂಡನಾಯಕರನ್ನಾಗಿಯೂ, ಅಡಕ್ಕಾರು ಅಣ್ಣೇಗೌಡರನ್ನು ಖಜಾಂಚಿಯಾಗಿಯೂ, ಸೋಮಯ್ಯ, ಚೆಟ್ಟಿಕುಡಿಯ, ಕುರ್ತು ಕುಡಿಯರನ್ನು ದಳಪತಿಗಳಾಗಿಯೂ ಮತ್ತು ಕೊಡಗಿನಲ್ಲಿರುವ ಸೈನ್ಯದ ದಂಡನಾಯಕರನ್ನಾಗಿ ಗುಡ್ಡೆಮನೆ ಅಪ್ಪಯ್ಯ [ಬಲಮುರಿಗ್ರಾಮ] ನವರನ್ನು ನೇಮಿಸಿದ ಒಂದು ನಿರೂಪವನ್ನು ಬರೆಸಿದರು. ಅದರ ನಂತರ ಪ್ರಜೆಗಳಿಗಾಗಿ ಒಂದು ನಿರೂಪವನ್ನು ಬರೆಸಿ ಅದರಲ್ಲಿ ಕೊಡಗು ಸಂಸ್ಥಾನದ ಪರವಾಗಿ ಕೊಡಗಿನ ರಾಜ್ಯಪಾಲರಾದ ಕಲ್ಯಾಣ ಸ್ವಾಮಿಗೆ ಹಿಂದಿನ ರಾಜಮನೆತನದ ಪರವಾಗಿ ಭಕ್ತಿಯನ್ನು ತೋರಿಸಬೇಕೆಂದೂ, ಕೊಡಗನ್ನು ಬ್ರಿಟೀಷರಿಂದ ಸ್ವತಂತ್ರವಾಗಿ ಮಾಡುವುದಕ್ಕೆ ಸಿಕ್ಕಿದ ಈ ಸಂದರ್ಭವನ್ನು ಕಳೆದುಕೊಳ್ಳಬಾರದೆಂದೂ ಭೂಮಿ ಕಂದಾಯ ಮೂರು ವರ್ಷಗಳವರೆಗೆ ಎತ್ತುವುದಿಲ್ಲವೆಂದೂ, ದಕ್ಷಿಣಕನ್ನಡ ಜಿಲ್ಲೆಯಲ್ಲಿ ಉಪ್ಪು ಮತ್ತು ಹೊಗೆಸೊಪ್ಪು ಮಾರಾಟ ಗುತ್ತಿಗೆಯನ್ನು ತೆಗೆದುಬಿಡುವುದಾಗಿಯೂ ಬೇರೆ ಬೇರೆ ದೇಶಗಳಲ್ಲಿ ಬ್ರಿಟೀಶರ ಅಧಿಕಾರ ಅಡಗಿ ಹೋಗಿದೆ ಎಂದೂ, ಚಿಕ್ಕವೀರರಾಜೇಂದ್ರ ಒಡೆಯರು ಆದಷ್ಟು ಬೇಗನೆ ಕಾಶಿಯಿಂದ ಹಿಂತಿರುಗುವರೆಂದೂ, ಜನರು ತಮ್ಮ ತಮ್ಮ ಆಯುಧಗಳೊಡನೆ ಬಂದು ಸ್ವಾತಂತ್ರ್ಯ ಸಂಗ್ರಾಮಕ್ಕೆ ಸೇರಬೇಕೆಂದೂ ಬರೆಸಿ ಅದರ ಯಥಾ ನಕಲನ್ನು ರಾಮಗೌಡರು ಮತ್ತು ಕುಕ್ಕುನೂರು ಚೆನ್ನಯ್ಯನವರು ಮೂರು ನಾಲ್ಕು ಬ್ರಾಹ್ಮಣ ಮುತ್ಸದ್ಧಿಗಳಿಂದ ಬರೆಸಿ ಅವುಗಳನ್ನು ಚೆಂಬುಪೆರಾಜೆಗಳ ಪಾರ್ಪತಿಗಾರರಿಗೂ, ಮಂಜ್ರಬಾದು ಸೀಮೆಯ ಪಟೇಲರಿಗೂ, ತಾವುನಾಡು ಬೇಂಗುನಾಡುಗಳ ಪಾರುಪತ್ತೆಗಾರರಿಗೂ, ದಿವಾನ್ ಪೊನ್ನಪ್ಪನವರಿಗೂ, ದೂತರ ಮೂಲಕ ಕಳುಹಿಸಿದರು.

ಈ ರೀತಿ ನಿರೂಪಗಳನ್ನು ಕಳುಹಿಸಿದ ನಂತರ ಒಂದು ಬೆಳ್ಳಿ ಕಟ್ಟದಿಂದ ಮಾಡಿದ ಸ್ವಾತಂತ್ರ್ಯ ದೀವಟಿಗೆಯನ್ನು ಮತ್ತು ಬಾವುಟ ಹಿಡಿದ ದೂತರು ಮುಂದೆ ನಡೆಯುತ್ತ ಅದರ ಹಿಂದೆ ಕಲ್ಯಾಣ ಸ್ವಾಮಿ, ರಾಮಗೌಡರು, ನಂಜಯ್ಯನವರೂ ಅವರ ಹಿಂದೆ ಸೋಮಯ್ಯ ಚೆಟ್ಟಿಕುಡಿಯ ಕರ್ತು ಕುಡಿಯರು ಕುಮರೆಗಳ ಮೇಲೆಯೂ ಉಳಿದ ಸೈನಿಕರು ಎರಡು ಸಾಲುಗಳಾಗಿ ತಮ್ಮ ತಮ್ಮ ಆಯುಧಗಳೊಡನೆ ಜಯಕಾರವನ್ನು ಹಾಕುತ್ತಾ ಮುನ್ನಡೆದರು. ಸೈನಿಕರಲ್ಲಿ ಕೆಲವರಿಗೆ ಕೋವಿಗಳಿದ್ದವು. ಇನ್ನೂ ಕೆಲವರು ಖಡ್ಗಗಳನ್ನೂ ಗುರಾಣಿಯನ್ನೂ ಕತ್ತಿಗಳನ್ನೂ, ಈಟಿ ಭರ್ಜಿಗಳನ್ನೂ, ಕೊತ್ತಳಿಕೆಗಳನ್ನೂ ಕೆಲವರು ದೊಣ್ಣೆ ಬಡಿಗೆಗಳನ್ನು ಹಿಡಿದಿದ್ದರು. ಈ ಸೈನಿಕರಲ್ಲಿ, ಗೌಡರು, ಲಿಂಗಾಯಿತರು, ಕೊಡಗರು, ಬ್ರಾಹ್ಮಣರು, ಬಂಟರು, ಮಾಪಿಳ್ಳೆಯರು, ಅಜಲರು, ಪಾಲೆಯರು, ನಾಯ್ಕರು, ಮಲೆಯಾಳಿ ನಾಯಕರು, ಕುಡಿಯರು, ಕೊಂಕಣಿಗರು, ಯಾವ ಜಾತಿ ಭಾಷೆಗಳ ಬೇಧವಿಲ್ಲದೆ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ಸೇರಿದ್ದರು.

[ಮುಂದುವರಿಯುವುದು]

ಗಂಗರಸರ ರಾಜಧಾನಿ ತಲಕಾಡು

ಲೇಖನ : ಟಿ.ಆರ್. ಮುದ್ದೇಗೌಡ

[ಹಿಂದಿನ ಸಂಚಿಕೆಯಿಂದ]

ಇತಿಹಾಸಕಾರರು, ವಿದ್ವಾಂಸರುಗಳನೇಕರು ತಲಕಾಡು ಗಂಗರ ಬಗ್ಗೆ ಅಧ್ಯಯನ ಮಾಡಿ, ಚರ್ಚೆ ಮಾಡಿ ಕೊಂಗಣಿ ವರ್ಮನೇ ತಲಕಾಡು ಗಂಗ ವಂಶಸ್ಥನೆಂದೂ, ಗಂಗ ವಂಶ ಸ್ಥಾಪಕನೆಂದೂ (ಧಡಿಗಾ ಮಾಧವ) ಖಚಿತಪಡಿಸಿಕೊಂಡಿದ್ದರೂ ಯಾವ ವಿದ್ವಾಂಸರಾಗಲಿ, ಇತಿಹಾಸಕಾರರಾಗಲಿ ಯಾವ ಸಂದರ್ಭದಲ್ಲಿಯೂ ತಲಕಾಡಿನ ಗಂಗರು ಯಾವ ಪಂಗಡ ಅಥವಾ ಜಾತಿಗೆ ಸೇರಿದರೆಂದು ಗುರುತಿಸಿಲ್ಲ. ಈ ಅಂಶದ ಬಗ್ಗೆ ಆಲೋಚನೆ ಮಾಡಿ ನೋಡಿದಾಗ ಇವರು ಅಭ್ಯಸಿಸಿದ ಗ್ರಂಥಗಳಾವುದರಲ್ಲಿಯೂ ತಲಕಾಡು ಗಂಗರ ಜಾತಿಯು ಯಾವುದೆಂದು ವ್ಯಕ್ತವಾಗಿಲ್ಲವೆಂದು ಭಾವಿಸಬಹುದಾಗಿದೆ. ಗಂಗವಾಡಿ 96,000 ಅಲ್ಲದೆ ಗಂಗ ಸಾಮ್ರಾಜ್ಯದ ವಿಷಯಗಳನ್ನು ಪ್ರಸ್ತಾಪಿಸಿ ಗಂಗರು ಪ್ರರಾಕ್ರಮದಿಂದ ರಾಜ್ಯವಾಳಿದುದನ್ನು ಶಾಸನಾಧಾರ ಗ್ರಂಥಗಳಾಧಾರದ ಮೇಲೆ ತಮ್ಮ ಕೃತಿಗಳನ್ನು ರಚಿಸಿರುತ್ತಾರೆ. ಆದರೆ ಗಂಗ ವಂಶಜರ ಜಾತಿಯನ್ನು ಮಾತ್ರ ಎಲ್ಲೂ ವಿವರಿಸಿಲ್ಲ.

ಗಂಗರು ತಮ್ಮ ಆಡಳಿತ ಕಾಲದಲ್ಲಿ ರೋಮ್, ಇಟಲಿ ಮತ್ತು ಗ್ರೀಕ್ ಮುಂತಾದ ದೇಶಗಳೊಡನೆ ಬಹಳ ಹಿಂದಿನ ಕಾಲದಿಂದಲೂ ವ್ಯಾಪಾರ ಸಂಬಂಧ ಇಟ್ಟುಕೊಂಡಿದ್ದುದು ಕಂಡುಬರುತ್ತದೆ. ಇತ್ತೀಚೆಗೆ ಪುರಾತತ್ವ ಇಲಾಖೆಯುವರು ತಲಕಾಡಿನಲ್ಲಿ ಸಂಶೋಧನೆ ನಡೆಸಿ ಹೊಸ ಹೊಸ ವಿಚಾರಗಳನ್ನು ಹೊರಚೆಲ್ಲಿರುವ ವಿವರಗಳಿವೆ. ಮತ್ತು ಇನ್ನೂ ಸಂಶೋನೆಯು ಮುಂದುವರೆದಿದೆ. ಇನ್ನೂ ಹೆಚ್ಚಿನ ವಿಚಾರಗಳು ಮುಂದೆ ಬೆಳಕಿಗೆ ಬರಬಹುದು.

ಈಗಾಗಲೇ ಪ್ರಾಚೀನ ಶಾಸನವನ್ನು ಆಧರಿಸಿ ಗ್ರಂಥಗಳು ಶಿಲ್ಪಗಳನ್ನು ಸುಧೀರ್ಘವಾಗಿ ಪರಿಶೀಲಿಸಿ ನೋಡಿ ಶತಮಾನಗಳ ಹಿಂದೆಯೇ ತಲಕಾಡು ಗಂಗರು ನಾಗರೀಕತೆಯಲ್ಲಿ ಮುಂದುವರೆದಿದ್ದರೂ ಮತ್ತು ಮುಂದುವರಿದ ದೇಶಗಳ ನಡುವೆ ವ್ಯವಹರಿಸುತ್ತಿದ್ದರೂ ಎಂಬುದಕ್ಕೆ ಅವರುಗಳು ಆಡಳಿತ ಮಾಡಿದ ಸ್ಥಳಗಳಲ್ಲಿ ದೊರೆತಿರುವ ಅವಶೇಷಗಳು, ಶಾಸನಗಳು, ನಾಣ್ಯಗಳು ಉಪಯೋಗಿಸುತ್ತಿದ್ದ ಆಗಿನ ಕಾಲದ ವಸ್ತುಗಳು, ಕುದುರೆಗಳು ಆನೆಗಳು, ಆಭರಣಗಳನ್ನು ಹೊಂದಿದೆ ಅಚ್ಚುಗಳು ದೊರಕಿರುವುದು, ಶಿಲಾ ಶಾಸನಗಳು, ತಾಮ್ರ ಶಾಸನಗಳು ಹಾಗೂ ಗ್ರಂಥಗಳ ಆಧಾರದ ಮೇಲೆ ವಿಚಾರ ಮಾಡಿ, ವಿಮರ್ಶೆ ಮಾಡಿ ತಲಕಾಡು ಗಂಗರು ಇತರೆ ರಾಜಮನೆತನದವರೆಗಿಂತ ದೀರ್ಘಕಾಲ ದಕ್ಷಿಣ ಭಾರತದಲ್ಲಿ ರಾಜ್ಯಾಡಳಿತ ನಡಿಸಿದರೆಂಬ ಕೀರ್ತಿಗೆ ಪಾತ್ರರಾಗಿರುತ್ತಾರೆ ಎಂದು ಖಚಿತಪಡಿಸುತ್ತಾರೆ. ಆದರೆ ತಲಕಾಡು ಗಂಗರು ಯಾವ ಪಂಗಡಕ್ಕೆ (ಜಾತಿ) ಸೇರಿದರೆಂದು ಮಾತ್ರ ಬರೆದಿರುವುದಿಲ್ಲ. ಈ ಜನಾಂಗದವರು ಯಾವ ಕಸುಬನ್ನು ಮಾಡುತ್ತಿದ್ದರು ಎಂದು ವಿಚಾರಣೆ ಮಾಡಿರುತ್ತಾರೆ. ಆಡು ಭಾಷೆ, ಸಂಪ್ರದಾಯದ ಬಗ್ಗೆ ವಿಚಾರ ಮಾಡಿರುತ್ತಾರೆ. ಗಂಗರ ಬಿರುದಾವಳಿಗಳನ್ನು ರಕ್ತಸಂಬಂಧಗಳನ್ನು ಧೀರ್ಘ ವಿಚಾರ ವತಡಿ ಸೃಷ್ಟೀಕರಿಸಿರುತ್ತಾರೆ. ಆದರೆ ಗಂಗರು ಯಾವ ಜಾತಿಗೆ ಸೇರಿದವರೆಂದು ಬರೆಯದೇ ವಿಷಯವನ್ನು ನಿಗೂಡವಾಗಿಯೇ ಇಟ್ಟಿರುತ್ತಾರೆ. ಇದರಿಂದ ತಿಳಿಯುವುದೇನೆಂದರೆ ಕೆಲವು ವಿದ್ವಾಂಸರುಗಳು ಕೆಲವು ವಿಷಯಗಳನ್ನು ವಿಮರ್ಶಿಸಿಲ್ಲವೆಂದು ಸ್ಪಷ್ಟವಾಗುತ್ತದೆ.

ಇತಿಹಾಸಕಾರರ ಪ್ರಕಾರ ತಲಕಾಡಿನ ಗಂಗರು ಗಂಗವಾಡಿ 96000 ಗಂಗರವಂಶಸ್ಥರು ಕೊಂಗಣೀವರ್ಮನ ವಂಶಸ್ಥರು (ಧಡಿಗ, ಮಾಧವ) ಅವರು ಒಕ್ಕಲಿಗವರೆಂದೂ ಅವರ ಕಸುಬು, ಧರ್ಮ, ಭಾಷೆ, ಸಂಪ್ರದಾಯಗಳನ್ನೂ, ಸಂಸ್ಕೃತಿ ಇವುಗಳನ್ನು ಪರಿಶೀಲಿಸಿದ ನಂತರ ಅವರು ಒಕ್ಕಲಿಗ ಬಣಕ್ಕೆ ಸೇರಿದವರೆಂದೂ ಗುರುತಿಸಿದ ಮೇಲೆ ಜಾತಿಯ ಅಂಶವನ್ನೇಕೆ ಗುರ್ತಿಸಲಿಲ್ಲ ? ಬಹುಶಃ ವಿದ್ವಾಂಸರಾದ ಡಾ|| ಇಡ್ಗರ್ ಥರ್ಮಸ್ಥನ್ ಎಂಬುವರು ಬರೆದಿರುವ ಗ್ರಂಥವನ್ನು ವಿಮರ್ಶೆ ಮಾಡಿರಲಾರರು. ಡಾ|| ಥರ್ಮಸ್ಟನ್‌ರವರು “ಕ್ಯಾಸ್ಟ ಅಂಡ್ ಟ್ರೈಬ್ಸ್ ಆಫ್ ಸೌತ್ ಇಂಡಿಯಾ” ಎಂಬ ಗ್ರಂಥವನ್ನು ಬರೆದಿರುತ್ತಾರೆ. ಆ ಗ್ರಂಥದಲ್ಲಿ ಜಾತಿಗಳ ಬಗ್ಗೆ ಜಾತಿಗಳ ಉಪಪಂಗಡಗಳ ಬಗ್ಗೆಯೂ ಸಹ ವಿವರವಾಗಿ ಬರೆದಿರುತ್ತಾರೆ. ಡಾ|| ಈಡ್ಗರ್ ಥರ್ಮಸ್ಟನ್‌ರವರ ಗ್ರಂಥದ ಆಧಾರದ ಪ್ರಕಾರ ತಲಕಾಡು ಗಂಗರು ಕೊಂಗಣಿ ವರ್ಮನ ವಂಶಸ್ಥರು (ಧಡಿಗ, ಮಾಧವ) ವೆಳ್ಳಾಳ ಅಥವಾ ಬೆಳ್ಳಾಳ – ಒಕ್ಕಲಿಗ ಜಾತಿಗೆ ಸೇರಿದವರು ಎಂದು ಸ್ಪಷ್ಟವಾಗಿ ತಿಳಿಸಿರುತ್ತಾರೆ. ಕೊಂಗ ವೆಳ್ಳಾಳ ಗಂಗ ವಂಶದವರೆಂದೂ ಸ್ಪಷ್ಟವಾಗಿ ಬರೆದಿದ್ದಾರೆ. [ಡಾ|| ಈಡ್ಗರ್ ಥರ್ಮಸ್ಟನ್ ವಾಲ್ಯೂಮ್ 7 ಟಿ– ಝಡ್ ಪು. 361-389]

ಆದರೆ ಇದುವರೆಗೆ ದಕ್ಷಿಣ ಭಾರತದ ಇತಿಹಾಸ, ತಲಕಾಡು ಗಂಗರ ಇತಿಹಾಸ ಪರಂಪರೆ ಮತ್ತು ಒಕ್ಕಲಿಗರ ಇತಿಹಾಸ ದರ್ಶನ ಸಂಸ್ಕೃತಿ ಪರಂಪರೆ ಎಂಬ ಎಂಬ ಗ್ರಂಥವನ್ನು ಅನೇಕ ವಿದ್ವಾಂಸರುಗಳು ಬರೆದಿರುತ್ತಾರೆ.

[ಮುಂದುವರೆಯುವುದು]

ಗೌಡರ ವಿವಾಹ ಪದ್ಧತಿ

[ಹಿಂದಿನ ಸಂಚಿಕೆಯಿಂದ]

ಅಷ್ಟರಲ್ಲಿ ವಧುವಿನ ಭಾಗದ 2 ಮುತ್ತೈದೆಯರು ತಲೆಗೆ ವಸ್ತ್ರ ಹಾಕಿ ದೀಪಕ್ಕೂ, ಬಣ್ಣ ಬಂಗಾರ ಬಳಸಿದ ತಟ್ಟೆಗೂ ಅಕ್ಕಿ ಹಾಕಿ 5/7 ಬಾರಿ ನಮಸ್ಕರಿಸಿ, ತೆಗೆದು ಕೊಂಡಾಗ ದಿಬ್ಬಣದ ಕಡೆಯ ಮುತ್ತೈದೆಯರು ಕೂಡಾ ದೀಪಕ್ಕೂ ಬಣ್ಣ ಬಂಗಾರ ಬಳಸಿದ ತಟ್ಟೆಗೂ ಅಕ್ಕಿ ಹಾಕಿ ನಮಸ್ಕರಿಸಿ, ಅವರಿಂದ ತಾವು ತೆಗೆದುಕೊಂಡು, ದೀಪವನ್ನು ಮುಂದೆ ಹಿಡಿದು ಹಿಂದಿನಿಂದ ಬಣ್ಣ ಬಂಗಾರವನ್ನು ಮತ್ತು ಅದರೊಂದಿಗೆ ಮರದ ಬಾಚಣಿಗೆ, ಕರೀಮಣಿ, ಬಿಚ್ಚೋಲೆ, ಶೃಂಗಾರ ಸಾಧನಗಳ ಸಮೇತ ಒಂದು ಚಿಕ್ಕ ಚೂರಿ [ಹಿಂಗಾರ ಒಡೆಯುವುದಕ್ಕೆ] ತೆಗೆದುಕೊಂಡು ಶೋಭಾನೆ ಹೇಳುತ್ತಾ ಮಧುವಿನ ಮನೆಯ ನೆಲ್ಲಕ್ಕಿ ಅಡಿಯಲ್ಲಿ ವಧುವು ಕುಳಿತ ಹಸೆ ಚಾಪೆಗೆ ಬರುವುದು.

ಹೆಣ್ಣು ಹುಡುಕುವುದು :

ನೆಲ್ಲಕ್ಕಿ ಅಡಿಯಲ್ಲಿ ಹಸೆಗೆ ಸರಿಯಾಗಿ ಹಸೆ ಚಾಪೆಯಲ್ಲಿ ವಧುವು ಮತ್ತು ಅವಳೊಂದಿಗೆ ನಾಲ್ಕೈದು ಕನ್ಯೆಯರು ಒಟ್ಟು ಮುಸುಕು ಹಾಕಿ ಕುಳಿತಿರುವರು. ದಿಬ್ಬಣದ ಕಡೆಯ ಅಕ್ಕಂದಿರು ಸರಿಯಾಗಿ ಗುರುತಿಸಿ ಪ್ರಥಮವಾಗಿ ವಧುವನ್ನು ಮುಟ್ಟಿದರೆ ಶುಭವೆಂದು, ತಪ್ಪಿದರೆ ವಧುವಿನ ಕಡೆಯ ಅಕ್ಕಂದಿರು ತಮಾಷೆಯಾಗಿ ಮುಟ್ಟಿದ ಕನ್ಯೆಯನ್ನೆ ಕೊಡುವುದಾಗಿ ತರ್ಕ ಮಾಡುವರು. ಅನಂತರ ವಧುವು ಧರಿಸಿದ ಬಟ್ಟೆ, ಚಿನ್ನ ವಗೈರೆ ತೆಗೆಯಿಸಿ ಬಣ್ಣ ಬಂಗಾರದಲ್ಲಿ ತಂದಿದ್ದ ಸೀರೆ, ರವಕೆ. ಓಲೆ, ಮೂಗುತಿ, ಕಾಲುಂಗುರ, ಕಡಗ ಎಲ್ಲವನ್ನು ತೊಡಿಸಿ, ಮರದ ಬಾಚಣಿಗೆಯಲ್ಲಿ ಶಾಸ್ತ್ರಕ್ಕಾದರೂ ತಲೆ ಬಾಚಿದ ನಂತರ ಬೇರೆ ಬಾಚಣಿಗೆ ಉಪಯೋಗಿಸುವುದು. ಪೂರ್ಣ ಶೃಂಗರಿಸಿದ ನಂತರ ಮಡಿಲಕ್ಕಿಯನ್ನು ಕಟ್ಟುವುದು. ಪುನಃ ವಧುವನ್ನು ನೆಲ್ಲಕ್ಕಿ ಅಡಿಯಲ್ಲಿ ಕೂರಿಸುವುದು.

ತೆರವಿನ ಹಣ

ರೂ. 10-50

1.	ಶೃಂಗೇರಿ ಮಠಕ್ಕೆ ಹುಡುಗಿಯ ಮುತ್ತೈದೆತನಕ್ಕೆ	6–25
2.	ಎಲೆ ಅಡಿಕೆ ಖರ್ಚು	0-50
3.	ಹಾಲೆಮರ ಪಾದ ಕಂಬಕ್ಕೆ	1-25
4.	ಆರತಿಗಳಿಗೆ	1-25
5.	ಸ್ಥಳ ಮರ್ಯಾದೆ	1-25
		ರೂ. 10–50

ತೆರವಿನ ಹಣ :

ತೆರವಿನ ಹಣವಾದ 10-50 ಪೈಸೆ ಕಂಚಿಗೆ ಬಳಸಿ ವೀಳ್ಯದೊಂದಿಗೆ ಕೊಡುವುದು. ತೆರವಿನ ಹಣವಾದ 10-50 ಪೈಸೆಯಲ್ಲಿ ಶೃಂಗೇರಿ ಮಠಕ್ಕೆ ಮುತ್ತೈದೆ ಕಾಣಿಕೆಯಾಗಿ 6-25 ಆಗಿರುತ್ತದೆ. ಉಳಿದ 4-25 ಪೈಸೆಗಳಲ್ಲಿ ಸ್ಥಳಮರ್ಯಾದೆಯಾಗಿ 1–25 ಪೈಸೆ, ಹಾಲೆ ಮರದ ಪಾದ ಕಂಬದ ಕಾಣಿಕೆಯಾಗಿ, 1-25 ಪೈಸೆ, ಆರತಿಗೆ 1-25 ಪೈಸೆ ಮತ್ತು ಎಲೆ ಅಡಿಕೆಯ ಖರ್ಚಿಗಾಗಿ 50 ಪೈಸೆ ಎಂಬ ವಿವರ ಇದೆ. (ಕೆಲವು ಕಡೆ ಒಟ್ಟು 6-25 ಪೈಸೆಯ ತೆರವಿನ ಹಣವನ್ನು ಬಳಸುವರು) ಕಂಚಿಗೆ ಬಳಸಿದ ತೆರವಿನ ಹಣದೊಂದಿಗೆ ವೀಳ್ಯವನ್ನಿಟ್ಟು ಮೇಲೆ ಬಿಳಿವಸ್ತ್ರ ಮುಚ್ಚಿ "ಹತ್ತು ಕುಟುಂಬ ಹದಿನೆಂಟು ಗೋತ್ರ ದೇವಸಭೆ ಸಮಸ್ತರ ಸಂಗಡ ಕೇಳಿ ಒಕ್ಕಲೆ-ಜಮಾನರಿಗೆ ಚಪ್ಪರದ ಮೇಲ್ಕಟ್ಟಿನಡಿಯಲ್ಲಿ ತೆರವಿನ ಹಣದ ಕಂಚಿಗೆಯನ್ನು ಎತ್ತಿ ಕೊಡುವಂತೇವೆ..."ಎಂದು ಮೂರು ಬಾರಿ ಹೇಳಿ ಒಕ್ಕಲೆಜಮಾನರ ಹಸ್ತ ಕೊಡುವುದು. ಈಗ ಧಾರೆಗೆ ಸಮಯವಾದರೆ ಸೋದರ ಮಾವ ವಧುವಿಗೆ ಈ ಸಮಯದಲ್ಲಿ ಸೆರಗು ಹಣ ಕಟ್ಟುವುದು. ವರನ ಮನೆಯಲ್ಲಿ ನೀರು ವೀಳ್ಯ ಕೊಟ್ಟು ಕರೆಯಬೇಕು. ವಧುವಿನ ಶೃಂಗಾರ ಮುಗಿಸಿ, ಉಳಿದ ಹಿಂಗಾರದಲ್ಲಿ ಎರಡು

ಕೃಪೆ
ಗೌಡ ಸಂಸ್ಕೃತಿ ಕುಟುಂಬ ಕೈಪಿಡಿ

ಹಿಂಗಾರ ಹೂವಿನ ಮಾಲೆ ಕಟ್ಟಿ, ಧಾರೆ ಸಮಯಕ್ಕಾಗಿ ಕಾಯ್ದಿರಿಸುವುದು. ವಧುವಿನ ಶೃಂಗಾರ ಮಾಡಿ ಅಕ್ಕಂದಿರು ಹೊರಗೆ ಬಂದ ನಂತರವೇ ಮೇಲ್ಕಟ್ಟಿನಡಿಯಿಂದ ದೇವಸಭೆಯಲ್ಲಿ ಕುಳಿತವರು ಅನುವು ಪಡೆದು ಏಳುವುದು. ಧಾರೆಗೆ ಸಮಯವಾದರೆ ಒಡನೆಯೇ ಧಾರಾ ಕಾರ್ಯಕ್ಕೆ ಮುಂದುವರಿಯುವುದು.

ವೀಳ್ಯ ಬಳಸುವುದು :

ಬಣ್ಣ ಬಂಗಾರವನ್ನು ಮುತ್ತೈದೆಯರು ತೆಗೆದುಕೊಂಡು ಹೋದ ನಂತರ ಚೌಕಿಯಲ್ಲಿ ಕುಳಿತವರು ವೀಳ್ಯ ಶಾಸ್ತ್ರದಲ್ಲಿ ಉಳಿದ ವೀಳ್ಯವಾದ ತಾಯಿ ವೀಳ್ಯ, ತಂದೆ ವೀಳ್ಯ ಮತ್ತು ದೇಶ ಮಹಾನಾಡು ವೀಳ್ಯವನ್ನು ಬಳಸಿ, ವೀಳ್ಯಶಾಸ್ತ್ರದಲ್ಲಿ ಮಾಡಿದ ಎಲ್ಲಾ ಕ್ರಮದಂತೆ ಮಾಡಿ, ನೀರು ಮುಟ್ಟಿ ಅನುವು ಕೇಳಿ, ಹತ್ತು ಕುಟುಂಬ ಹದಿನೆಂಟು ಗೋತ್ರದ ಒಕ್ಕಣೆ ಹೇಳುವಾಗ "ದೇವಸಭೆ" ಎಂದು ಸೇರಿಸಿಕೊಳ್ಳುವುದು. ವೀಳ್ಯ ಕಟ್ಟಿ ಆದ ನಂತರ ಕಂಚಿಯಲ್ಲಿ ತೆರವಿನ ಹಣ ಬಳಸುವುದು.

ಆರತಿ ಮಾಡುವುದು :

[ಮುಂದುವರಿಯುವುದು]

ಗುಳಿಗರಾಜನ ಮಹಿಮೆ

ಪುರಾತನ ಕಾಲದಿಂದಲೂ ನಾವು ನಂಬಿಕೊಂಡು, ಪೂಜಿಸಿಕೊಂಡು ಬಂದಿರುವ ದೆವ್ವ ದೇವರುಗಳಲ್ಲಿ ಗುಳಿಗೆ ದೇವರು ಒಂದು. ಹೀಗೆ ಗುಳಿಗ ದೇವರನ್ನು ವರ್ಷಕ್ಕೆ ಒಂದು ಬಾರಿ ಕೋಲ ಕಟ್ಟುವುದರ ಮುಖಾಂತರ ನಡೆಸಿಕೊಂಡು ಬಂದ ಮನೆತನವು ಭಾಗಮಂಡಲ ನಾಡಿನ ನಿಡ್ಯಮಲೆ ಮನೆತನ. ಭಾಗಮಂಡಲ ನಾಡಿನ ನಿಡ್ಯಮಲೆ ಮನೆತನ ವಿಜೃಂಭಣೆಯಿಂದ ಗುಳಿಗನ ಕೋಲವನ್ನು ನಡೆಸುತ್ತಾ ಬಂದಿದ್ದಾರೆ. ಇದು ರಾತ್ರಿ ಸಮಯ ಪ್ರಾರಂಭವಾಗಿ ಬೆಳಗಿನಜಾವದವರೆಗೆ ನಡೆಯುತ್ತದೆ. ಇದು ಕಾವೇರಿ ಸಂಕ್ರಮಣ ಕಳೆದು 18–20 ದಿನಗಳಲ್ಲಿ ಇದನ್ನು ನಡೆಸಲಾಗುತ್ತದೆ. ಅದೇ ರೀತಿಯಲ್ಲಿ ಗುಳಿಗನ ಕೋಲದ ಮಾರನೆಯ ದಿವಸ ಶ್ರೀ ಭಗಂಡೇಶ್ವರ ದೇವಸ್ಥಾನದ ಚೌಂಡಿ ಕಳ ಎಂಬಲ್ಲಿ ಚಾಮುಂಡಿಯ ಕೋಲವು ನಡೆಯುತ್ತದೆ. ಇದು ಹಗಲಿನಲ್ಲಿ ನಡೆಯುತ್ತದೆ. ಹೀಗೆ ಈ ರೀತಿಯ ಕೋಲಗಳನ್ನು ನಡೆಸುವುದಕ್ಕೆ ಕೆಲವು ಹಿನ್ನೆಲೆಗಳು ಇವೆ. ಅದೇ ರೀತಿ ನಿಡ್ಯಮಲೆ ಮನೆತನದವರು ಗುಳಿಗನ ಕೋಲವನ್ನು ಆಚರಿಸುವುದಕ್ಕೆ ಒಂದು ಹಿನ್ನೆಲೆ ಇದೆ.

ದೇವರ ಸ್ಥಾನಗಳನ್ನು ನೋಡಿಕೊಳ್ಳಲು ಪಹರೆಗಾರರು ಇರುವಂತೆ ಹಿಂದೆ ಶ್ರೀ ಭಗಂಡೇಶ್ವರ ದೇವಸ್ಥಾನವನ್ನು ನೋಡಿಕೊಳ್ಳಲು ಪಹರೆಗಾರರಾಗಿ ನಿಡ್ಯಮಲೆ ಮನೆತನದ ಒಬ್ಬ ಅಜ್ಜ ಇದ್ದರಂತೆ. ಒಂದು ರಾತ್ರಿ ಶ್ರೀ ಭಗಂಡೇಶ್ವರ ದೇವಸ್ಥಾನ ಕೊಳ್ಳೆ ಹೊಡೆಯಲು ಕಳ್ಳರು ನುಗ್ಗಿದರಂತೆ. ಆಗ ಕಳ್ಳರು ಓಡಿ ಹೋಗದಂತೆ ದೇವಸ್ಥಾನದ ಮುಂದಿನ ಬಾಗಿಲಿನಲ್ಲಿ ಚಾಮುಂಡಿ, ಹಿಂದಿನ ಬಾಗಿಲಿನಲ್ಲಿ ಗುಳಿಗರಾಜನು ಅಡ್ಡ ನಿಂತರಂತೆ. ಆಗ ಕಳ್ಳರು ದೇವಸ್ಥಾನದ ಒಳಗೆ ಸಿಕ್ಕಿಬಿದ್ದರು. ಆಗ ಅಲ್ಲಿ ಪಹರೆ ಕಾಯುತ್ತಿದ್ದ ನಿಡ್ಯಮಲೆ ಮನೆತನದ ಅಜ್ಜ ಇನ್ನು ಮುಂದಕ್ಕೆ ಪ್ರತಿ ವರ್ಷ ನಮ್ಮ ಮನೆತನದವರು ಗುಳಿಗನ ಕೋಲವನ್ನು ಆಚರಿಸಿಕೊಂಡು ಬರುತ್ತೇವೆ ಎಂದು ಹೇಳಿಕೊಂಡರಂತೆ. ಅದೇ ರೀತಿ ಪ್ರತಿ ವರ್ಷ ಗುಳಿಗನ ಕೋಲವನ್ನು ನಿಡ್ಯಮಲೆ ಮನೆತನವು ಆಚರಿಸಿಕೊಂಡು ಬರುತ್ತಿದೆ.

● **ಹೊಸೂರು ಆರ್. ನಿರಂಜನ್,**
ಭಾಗಮಂಡಲ

ರಾಷ್ಟ್ರಮಟ್ಟದ ಎನ್.ಸಿ.ಸಿ. ಶಿಬಿರದಲ್ಲಿ ಮಿಂಚಿದ ಕು॥ ಬಿಟ್ಟೀರ ವೈನಿ ರಾಮಯ್ಯ

ಇತ್ತೀಚೆಗೆ ದೆಹಲಿಯಲ್ಲಿ ನಡೆದ ರಾಷ್ಟ್ರಮಟ್ಟದ ಎನ್.ಸಿ.ಸಿ. ಯ ಬಿ.ಎಲ್.ಸಿ. ತರಬೇತಿ ಶಿಬಿರದಲ್ಲಿ ಕರ್ನಾಟಕ ರಾಜ್ಯವು ಸೂಟಿಂಗ್ ಸಿಗ್ನಲ್ಸ್ ಹಾಗೂ ಸಾಮಾನ್ಯ ವೈದ್ಯಕೀಯ ಪರಿಣತೆಯಲ್ಲಿ 2ನೇ ಸ್ಥಾನ ಗಳಿಸಿ ಬೆಳ್ಳಿ ಪದಕಕ್ಕೆ ಪಾತ್ರವಾಯಿತು. 30 ಮಂದಿಯ ಕರ್ನಾಟಕ ತಂಡದಲ್ಲಿ, ಮಂಗಳೂರು ವಿಭಾಗದ ಇಬ್ಬರು ಪ್ರತಿನಿಧಿಗಳಲ್ಲಿ ಒಬ್ಬಳಾಗಿ ಮತ್ತು ಕೊಡಗಿನ ಏಕೈಕ ಪ್ರತಿನಿಧಿಯಾಗಿ ಕು॥ ಬಿಟ್ಟೀರ ವೈನಿ ರಾಮಯ್ಯ ಭಾಗವಹಿಸಿ ಪ್ರಶಸ್ತಿ ಪಡೆದಿದ್ದಾಳೆ.

ಈಕೆ ಮಡಿಕೇರಿಯ ಫೀಲ್ಡ್‌ಮಾರ್ಷಲ್ ಕಾರ್ಯಪ್ಪ ಕಾಲೇಜಿನಲ್ಲಿ 2ನೇ ಬಿ.ಎ. ವ್ಯಾಸಂಗ ಮಾಡುತ್ತಿದ್ದು, 12 ದಿನಗಳ ಕಾಲ ಶಿವಮೊಗ್ಗದಲ್ಲಿ, 36 ದಿನಗಳ ಕಾಲ ಬೆಳಗಾಂನಲ್ಲಿ ತರಬೇತಿಗೆ ಆರಿಸಲ್ಪಟ್ಟು ನಂತರ ಜರುಗಿದ 13 ದಿನಗಳ ರಾಷ್ಟ್ರಮಟ್ಟದ ಶಿಬಿರದಲ್ಲಿ ಭಾಗವಹಿಸಿ ಪ್ರಶಸ್ತಿಗೆ ಪಾತ್ರಳಾಗಿದ್ದಾಳೆ. ಪ್ರಸ್ತುತ ಮಹಿಳಾ ವಿಭಾಗದ ಎನ್.ಸಿ.ಸಿ. ಯಲ್ಲಿ ಸಿ.ಯು.ಓ. ಆಗಿದ್ದಾಳೆ.



ವೈನಿ ರಾಮಯ್ಯ

ಈ ಶಿಬಿರದಲ್ಲಿ ಕೊಡಗಿನ ಯುವತಿಯಾಗಿ ಮೊಟ್ಟ ಮೊದಲ ಅವಕಾಶವನ್ನು ಗಿಟ್ಟಿಸಿಕೊಂಡಿರುವ ವೈನಿ ಮಡಿಕೇರಿಯ ಪುರಸಭೆ ಸದಸ್ಯ ಹಾಗೂ ಮಡಿಕೇರಿ ಚೌ[illegible] ಬ್ಯಾಂಕ್ ಉಪಾಧ್ಯಕ್ಷ ರಾಮಯ್ಯ ಹಾಗೂ ಪದ್ಮಾವತಿ ದಂಪತಿಗಳ ಹೆಮ್ಮೆಯ ಏಕೈಕ ಪುತ್ರಿಯಾಗಿದ್ದಾಳೆ.

ವೈನಿ ರಾಮಯ್ಯ ಕವನಗಳನ್ನು ರಚಿಸುವ ಅಭಿರುಚಿಯನ್ನು ಹೊಂದಿದ್ದು, ಭರತನಾಟ್ಯ ಪ್ರವೀಣೆಯೂ ಆಗಿದ್ದಾಳೆ. ನಮ್ಮ ಯುವತಿಯರು ಕೆಳಸ್ತರದಿಂದ ಇಂದು ರಾಷ್ಟ್ರಮಟ್ಟದ ಕಾರ್ಯಕ್ರಮಗಳತ್ತ ಮುನ್ನಡೆಯುತ್ತಿರುವುದು ನಮ್ಮ ಜನಾಂಗಕ್ಕೆ ಶುಭ ಸೂಚಕವಾಗಿದೆ.

● **ಸಂಗಾತಿ ವರದಿ**

ಕನ್ನಡ

ರಾಜಧಾನಿ ಬೆಂಗಳೂರಲ್ಲಿ - ತಂಬೀ ಎನ್ನಡ
ಉತ್ತರದಿ ತೆಲುಗಲ್ಲಿ - ಹಾಂ ಎಕ್ಕಡ ?
ದಕ್ಷಿಣ ಕೊಡಗಲ್ಲಿ - ಎಂದಡಾ, ಆರಡಾ ?
ಇದುವೆ ನಮ್ಮೆಲ್ಲರ-ಹೆ(ಎ)ಮ್ಮೆಯ ಕನ್ನಡ

● **ಶಶಿಪ್ರಿಯ,** ಕೊಳಕೇರಿ

ಅಡ್ವೊಕೇಟ್ ಜನರಲ್ ಮಾವೋಜಿ ಜನಾರ್ಧನರವರು ಇನ್ನಿಲ್ಲ

ನ್ಯಾಯಮೂರ್ತಿಗಳಾದ ಆರ್.ಪಿ. ಶೇಠಿಯವರು, ಮತ್ತು ಎ. ಎಂ. ಪರೂಖ್ ರವರು ತಾ|| 12-10-97 ರಂದು ರಾತ್ರಿ 11-30 ರಲ್ಲಿ ನಮ್ಮನ್ನೆಲ್ಲ ಅಗಲಿದ ಶ್ರೀ ಎಂ.ಆರ್. ಜನಾರ್ಧನರವರ ಬಗ್ಗೆ ಸಂತಾಪ ಸೂಚಿಸಿದ್ದಾರೆ. ಕೊಡಗು ಜಿಲ್ಲೆಯ ಪೆರಾಜೆ ಎಂಬ ಗ್ರಾಮದ ರೈತಾಪಿ ಕುಟುಂಬದಲ್ಲಿ 24-6-1930 ರಂದು ಜನಿಸಿದರು. ಅವರ ವಿದ್ಯಾಭ್ಯಾಸವು ಅತೀ ಉನ್ನತ ಮಟ್ಟದ್ದಾಗಿದ್ದು, 1958 ರಲ್ಲಿ ಬಿ. ಎಲ್. ಡಿಗ್ರಿಯನ್ನೂ, ಎಂ. ಎಲ್ ಸ್ನಾತಕೋತ್ತರ ಪದವಿಯನ್ನು 1962 ರಲ್ಲೂ ಮೈಸೂರು ವಿಶ್ವವಿದ್ಯಾನಿಲಯ ದಿಂದ ಗಳಿಸಿದರು. ಇವರು ಇಂಟರ್ ಮೀಡಿಯೇಟ್ ಪರೀಕ್ಷೆಯಿಂದ ಹಿಡಿದು ಎಂ.ಎಲ್. ಪದವಿವರೆಗೆ ಪ್ರಥಮ ರ್‍ಯಾಂಕ್ ಗಳಿಸಿರುತ್ತಾರೆ. ಎಂ.ಎಲ್.ನ ಮೊದಲನೇ ಬ್ಯಾಚ್ ವಿದ್ಯಾರ್ಥಿಗಳಲ್ಲಿ ಇವರೊಬ್ಬರೇ ತೇರ್ಗಡೆಯಾದವರು. ಇವರಿಗೆ ನಾಲ್ಕು ಚಿನ್ನದ ಪದಕಗಳು ದೊರೆತಿವೆ. ಜ್ಯೂರಿಸ್ ಪಡೆನ್ಸಿಯಲ್ಲಿ ಹೆಚ್ಚಿನ ಮಾಹಿತಿಯನ್ನು ಪಡೆದವರು. 4-11-1959 ರಲ್ಲಿ ವಕೀಲರಾಗಿ ಸೇವೆ ಪ್ರಾರಂಭಿಸಿದ ಇವರು ವಕೀಲ ವೃತ್ತಿಯನ್ನು ಮೊಟ್ಟಮೊದಲು ಶ್ರೀ ಎಸ್. ವಿ. ಸುಬ್ರಹ್ಮಣ್ಯ ಎಂಬ ಪ್ರಖ್ಯಾತ ವಕೀಲರ ಜೊತೆಯಲ್ಲಿ ಪ್ರಾರಂಭಿಸಿದ ನಂತರ ಬೆಂಗಳೂರಿನ ಖ್ಯಾತ ಹಿರಿಯ ವಕೀಲರಾಗಿದ್ದ ದಿವಂಗತ ಶ್ರೀ ವಿ. ಕೃಷ್ಣಮೂರ್ತಿಯವರ ಕಿರಿಯ ವಕೀಲರಾಗಿ ಸೇರಿದ ಜನಾರ್ಧನ್‌ರವರು 2-7-1988ರಲ್ಲಿ ಸೀನಿಯರ್ ಅಡ್ವೋಕೇಟರಾಗಿ ನೇಮಿಸಲ್ಪಟ್ಟರು. ಇವರ ವಕೀಲ ವೃತ್ತಿ ಅಸಲು ದಾವಾ ಹಾಗೂ ಮೇಲ್ಮನವಿ ದಾವಾಗಳನ್ನು ಮಾಡುತ್ತಿದ್ದರು. ಕಾನೂನು ಬಗ್ಗೆ ಆಳವಾದ ಜ್ಞಾನವಿದ್ದರು ಅರೆಕಾಲಿಕ ಪ್ರಾಧ್ಯಾಪಕರಾಗಿ 25 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಇವರ ವಿದ್ಯಾರ್ಥಿಗಳು ನ್ಯಾಯಾಂಗದಲ್ಲಿ ಶೋಭಿಸುತ್ತಿದ್ದಾರೆ. ಒಬ್ಬ ಚೇತನ ಕೊಡುವ ಉಪಾಧ್ಯಾಯರಾಗಿ ಕಾನೂನಿನ ಸಿದ್ಧಾಂತದ ಮತ್ತು ಬಳಕೆಯ ಅಧ್ಯಾಪಕರಾಗಿದ್ದರು. ಇವರು "ಪ್ರಾರಂಭ ಮಾಡುವವರಿಗೆ ಒಂದು ಮಾತು" ಮತ್ತು "ಜೀವನದ ಹಕ್ಕು" ಎಂಬ ಎರಡು ಅತ್ಯುತ್ತಮ ಗ್ರಂಥವನ್ನು ಬರೆದಿರುತ್ತಾರೆ. ಇವೆರಡೂ ಪುಸ್ತಕಗಳು ತುಂಬಾ ಜನಪ್ರಿಯವಾಗಿದ್ದು ಇವುಗಳನ್ನು 1981 ಮತ್ತು 1990ರಲ್ಲಿ ಪ್ರಕಟಿಸಿದ್ದಾರೆ. ಇವರು ಇಂಗ್ಲೆಂಡ್, ಅಮೇರಿಕಾ ಮತ್ತು ಇಟಲಿ ಮುಂತಾದ ಅನೇಕ ಹೊರದೇಶಗಳಿಗೆ ಭೇಟಿ ಕೊಟ್ಟು ಅಮೇರಿಕಾದ ವಿಶ್ವವಿದ್ಯಾಲಯಗಳಲ್ಲಿ ಹಿಂದೂ ಕಾನೂನು ಫೆಡರಲ್ ಮತ್ತು ಕಂಪ್ಯಾರಿಟೇವ್ ನ್ಯಾಯಶಾಸ್ತ್ರದ ಬಗ್ಗೆ ಭಾಷಣವನ್ನು ಮಾಡಿದ್ದಾರೆ. 22-2-1994 ರಿಂದ 12-6-1996 ರವರೆಗೆ ಕರ್ನಾಟಕದ ಅಡ್ವೋಕೇಟ್ ಜನರಲ್ಲಾಗಿ ಸೇವೆ ಸಲ್ಲಿಸಿದ್ದಾರೆ. ವಕೀಲ ವೃತ್ತಿಯಲ್ಲಿ ದೊಡ್ಡ ರೀತಿಯ ಅಂತಸ್ತು ಮತ್ತು ಮರ್ಯಾದೆಯನ್ನು ಕಾಪಾಡಿಕೊಂಡು ಬಂದಿದ್ದ ಇವರು ಅಪಾರ ಬಂಧುಗಳನ್ನು, ಸ್ನೇಹಿತರನ್ನೂ, ಹಾಗೂ ಪತ್ನಿ, ಪುತ್ರ ಹಾಗೂ ಸೊಸೆಯನ್ನು ಅಗಲಿದ್ದಾರೆ. ಇವರ ಪತ್ನಿ ಪುತ್ರ ಹಾಗೂ ಸೊಸೆಯವರು ಸಹ ವಕೀಲರಾಗಿದ್ದಾರೆ.

ಬಾರ್ ಕೌನ್ಸಿಲ್‌ನವರು ಸಂತಾಪ ಸೂಚಿಸಿ, ಮೃತರ ಆತ್ಮಕ್ಕೆ ದೇವರು ಶಾಂತಿಯನ್ನು ಕೊಡಲೆಂದು ಗೌಡ ಜನಾಂಗದ ಪರವಾಗಿ 'ಕೊಡಗು ಸಂಗಾತಿ' ಪ್ರಾರ್ಥಿಸುತ್ತದೆ.

ವರದಿ : **ನೂಜಿ ದಿನಕರ ಗೌಡ,** ಬೆಂ.

ಮಡಿಕೇರಿಯಲ್ಲಿ 'ಕೊಡಗು ಗೌಡ ಮಹಿಳಾಒಕ್ಕೂಟ' ಸ್ಥಾಪನೆ

ದಿನಾಂಕ 3-11-97ನೇ ಸೋಮವಾರ ಕೊಡಗು ಗೌಡ ವಿದ್ಯಾ ಸಂಘದ ಆಶ್ರಯದಲ್ಲಿ ಮಹಿಳೆಯರೆಲ್ಲಾ ಸೇರಿ ಚರ್ಚಿಸಿ ಗೌಡ ಮಹಿಳೆಯರ ಸಂಘಟನೆ, ಗೌಡ ಸಂಸ್ಕೃತಿ ಬೆಳವಣಿಗೆ, ಗೌಡ ಮಹಿಳೆಯರ ಕ್ಷೇಮಾಭಿವೃದ್ಧಿಗಾಗಿ ಟೊಂಕ ಕಟ್ಟಿ ಶ್ರಮಿಸುವ ಸಲುವಾಗಿ "ಕೊಡಗು ಗೌಡ ಮಹಿಳಾ ಒಕ್ಕೂಟ" ಸ್ಥಾಪನೆಯಾಯಿತು. ಜೊತೆಯಲ್ಲಿ ಈ ಕೆಳಗಿನ ಪದಾಧಿಕಾರಿಗಳು ಆಯ್ಕೆಯಾದರು.

ಅಧ್ಯಕ್ಷೆ ಶ್ರೀಮತಿ ಚೀಯಂಡಿರ ರಾಧ, ಉಪಾಧ್ಯಕ್ಷೆ ನೀರ್ಪಾಡಿ ನಾಗವೇಣಿ, ಗೌರವ ಕಾರ್ಯದರ್ಶಿ ಕೂಡಕಂಡಿ ಕಾವೇರಮ್ಮ, ಸಹಕಾರ್ಯದರ್ಶಿ ಕಾಳೇರಮ್ಮನ ಸರಸ್ವತಿ, ಖಜಾಂಚಿ ಸೂದನ ಕಮಲಮ್ಮ, ಸಂಘಟನಾಕಾರ್ಯದರ್ಶಿ ಬೈತಡ್ಕ ಜಾನಕಿ ಮತ್ತು ಪರಿವಾರ ತಂಗಮ್ಮ, ನಿರ್ದೇಶಕರುಗಳು ದಂಬೆಕೋಡಿ ಲೀಲಾ, ಪಂಜಿಪಳ್ಳ ಇಂದ್ರಾಕ್ಷಿ, ಕುಂಭಗೌಡನ ರಾಣಿ ಬೈತಡ್ಕ ದೇವಮ್ಮ, ಪೊನ್ನಚನ ಲಲಿತಮ್ಮ.

ಆಸಕ್ತ ಮಹಿಳೆಯರು ಸಂಘದ ಅಧ್ಯಕ್ಷರನ್ನು ಸಂಪರ್ಕಿಸಿ ಸಲಹೆಗಳನ್ನು ಪಡೆಯಬಹುದು.

● **ಸಂಗಾತಿ ವರದಿ**

ಗುಡಿಯು ದೇವರು

ಗುಡಿಯು ಒಳಗೆ ಮೂಕವಾಗಿಹ
ಕಡಿದ ಕಲ್ಲಿನ ದೇವನೆ ।
ಮೌನವ್ರತವನು ಮಾಡುತಿರುವೆಯಾ
ಯಾಕೆ ನಿನಗೀ ಚಿಂತನೆ ॥

ನುಡಿಯಲಾರೆನೀ ನಡೆಯಲಾರೆನೀ
ನೀನು ಇರುವೀ ಗುಡಿಯಲೀ ।
ನುಡಿಸುತಿರುವಿ ನೀ ನಡೆಸುತಿರುವಿನೀ
ನಾವು ನಡೆವೆವು ನಿನ್ನಡಿಯಲಿ ॥

ದಿನವು ನಿನ್ನಯು ಪೂಜಿಸುತ್ತಲಿ
ಹಾಡುತಿರುವರು ಕೀರ್ತನೆ ।
ಜಗದಿ ಕಷ್ಟದಿ ಸಿಲುಕಿದವರನು
ಮಾಡು ನೀ ಪರಿಪಾಲನೆ ॥

ಏಳು ನೀನೆದ್ದೇಳು ದೇವನೆ
ನಿಜರೂಪವ ತೋರುತಾ ।
ಭಕ್ತರು ಕಾಯುತಿರುವರು
ಒಲಿದು ಬಾ ದಯತೋರುತ ॥

ಮನು ಶರೀರದ ಹೃದಯದೇಗುಲ
ತೆರೆದು ಕರೆವರು ನಿನ್ನನು ।
ನಿನ್ನ ಶಕ್ತಿಯು ಮಹತ್ವ ಸೆಳೆವುದು
ಭಕ್ತರ ತನು ಮನವನು ॥

ಕಲ್ಲು ಹೃದಯವು ನಿನ್ನದೆನ್ನುವೆ
ಕಲ್ಲಿನೊಳಗೆ ನಿನ್ನಾಸರೆ ।
ಕಡಿದು ಕಲ್ಲಲಿ ರೂಪಕೊಟ್ಟರೂ
ಪೊಡಮಿಯೆ ನಿನ್ನ ಕೈ ಸೆರೆ ॥

ನಿರ್ಜೀವಕಲ್ಲದು ಗುಡಿಯಲ್ಲಿದ್ದರೂ
ಜನರು ನಿನ್ನಯು ಸನಿಹಕೆ ।
ಬಂದು ನಮಿಸರು ನಾನು ನಮಿಪೆನು
ಶರಣು ನಿನ್ನಯು ಚರಣಕೆ ॥

● ಹೊದ್ದೆಟ್ಟ ಭವಾನಿ ಶಂಕರ್

ನಾಳೆ ಎಂದೆನಬೇಡ ಕಂದಾ

ನಾಳೆ ನಾಳೆ ಎಂದೆನಬೇಡ ಕಂದಾ
ಇದು ಇಂದು ಎಂದೆನುತಲಿರು ಕಂದಾ
ನಾಳೆ ಎಂದವನ ಮನೆ ಹಾಳು ಚಿನ್ನ
ಇಂದು ಇಂದೆಂದವನ ಬಾಳು ಚಿನ್ನ ಚಿನ್ನಾ

ಇಂದು ಬೀಸುತಿಹ ಗಾಳಿ ಬೀಸದೇ ಹೋದರೆ ?
ಬೆಳಕು ನೀಡುವ ರವಿ ತಾ ಬಾರದೇ ಹೋದರೆ ?
ಹರಿಯುತಿಹ ನದಿ ತಾ ಹರಿಯದೇ ಹೋದರೆ ?
ಹಲುಬಿ ಹೊರೆಯಾಗಿ ಹಾಳಾಗದೇ ಬಾಳು ?

ಆರಿದ ಬಾವಿಗೆ ನೀರು ನಾಳೆ ಎಂದೆನುವೆಯಾ ನೀ ?
ಹಸಿದ ಹೊಟ್ಟೆಗೆ ಅನ್ನ ನಾಳೆ ಎಂದೆನುವೆಯಾ ನೀ ?
ನಿದ್ರೆ ನಾಳಿಗೆ ಎಂದು ಮುಂದೆ ಹಾಕುವೆಯಾ ನೀ?
ಇವು ಇಂದು ಎಂದಾಗ ಕೆಲಸವೇಕೆ ನಾಳೆ ?

● ಪೋರೆಯ್ಯನ ಎಲ್. ದಿನೇಶ್ ಕುಮಾರ್
ಪಾಲೂರು.

ನಿಮಗಿದು ಗೊತ್ತೆ ?

ಭಾರತದ ರಾಷ್ಟ್ರೀಯ ಕ್ರೀಡೆ — ಹಾಕಿ
ಆಸ್ಟ್ರೇಲಿಯಾದ ರಾಷ್ಟ್ರೀಯ ಕ್ರೀಡೆ — ಕ್ರಿಕೆಟ್
ಜಪಾನಿನ ರಾಷ್ಟ್ರೀಯ ಕ್ರೀಡೆ — ಜ್ಯೂಡೊ
ಸ್ಪೇನಿನ ರಾಷ್ಟ್ರೀಯ ಕ್ರೀಡೆ — ಗೂಳಿಕಾಳಗ
ಇಂಗ್ಲೆಂಡಿನ ರಾಷ್ಟ್ರೀಯ ಕ್ರೀಡೆ — ಫುಟ್‌ಬಾಲ್
ಅಮೇರಿಕಾದ ರಾಷ್ಟ್ರೀಯ ಕ್ರೀಡೆ — ಬೇಸ್‌ಬಾಲ್
ರಷ್ಯಾದ ರಾಷ್ಟ್ರೀಯ ಕ್ರೀಡೆ — ಐಸ್ ಹಾಕಿ

○ ಮುಕ್ಕಾಟಿ ಕುಸುಮಾಕರ ಕಿರಣ್
ಚೇರಂಬಾಣೆ, ಪಾಕ.

ಸೂಕ್ತಿ :

ಒಳ್ಳೆಯ ಕೆಲಸಗಳನ್ನು ಮಾಡುತ್ತ ಹೋದರೆ ಉತ್ತಮ ಸಂಸ್ಕಾರ ಬೆಳೆಯುತ್ತದೆ. ಅನಂತರ ಇಚ್ಛೆ ಇಲ್ಲದಿದ್ದರೂ ಒಳ್ಳೆಯ ಕಾರ್ಯದಲ್ಲಿ ಆಸಕ್ತರಾಗುವಂತೆ ಆ ಸಂಸ್ಕಾರ ನಮ್ಮನ್ನು ಪ್ರೇರಿಪಿಸುತ್ತದೆ.

–ಸ್ವಾಮಿ ವಿವೇಕಾನಂದ

ಕೊಡಗು ಗೌಡ ವಿದ್ಯಾಸಂಘ ಮಡಿಕೇರಿ ಇದರ ಆಶ್ರಯದಲ್ಲಿ "ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ" ರಚನೆ

ದಿನಾಂಕ 7-11-97ರ ಶುಕ್ರವಾರ ದಂದು ಕೊಡಗು ಗೌಡ ವಿದ್ಯಾ ಸಂಘದ ಆಶ್ರಯದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಕುಯ್ಯುಮುಡಿ ಪೂರ್ಣಯ್ಯನವರ ಘನ ಅಧ್ಯಕ್ಷತೆಯಲ್ಲಿ ಜನಾಂಗದ ಅಭಿವೃದ್ಧಿ ಮತ್ತು ಸಂಘಟಣೆಯ ವಿಶೇಷ ಸಭೆ ಸೇರಿ ಚರ್ಚಿಸಲಾಯಿತು. ಸರ್ವ ಸದಸ್ಯರ ಒಮ್ಮತದ ಅಭಿಪ್ರಾಯದ ಮೇರೆ ಕೊಡಗಿನಲ್ಲಿ ಗೌಡರ ಸಾಂಸ್ಕೃತಿಕ ಬೆಳವಣಿಗೆ ಮತ್ತು ಅಭಿವೃದ್ಧಿಗಾಗಿ **"ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ"** ಯನ್ನು ರಚಿಸಲಾಯಿತ್ತು. ನೂತನವಾಗಿ ರಚನೆಯಾದ ಅಕಾಡೆಮಿಯ ಅಧ್ಯಕ್ಷರಾಗಿ ಶ್ರೀ ತುಂತಜ್ಜ ಗಣೇಶ್‌ರವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತ್ತು. ಉಪಾಧ್ಯಕ್ಷರಾಗಿ ಶ್ರೀ ಗುಡ್ಡೇರ ಬಿ. ರಮೇಶ್‌ರವರು, ಕಾರ್ಯದರ್ಶಿಯಾಗಿ ಶ್ರೀ ಕೋಡಿ ಚಂದ್ರಶೇಖರ್‌ರವರು, ಖಜಾಂಚಿಯಾಗಿ ಶ್ರೀ ಮುಂಡೋಡಿ ಭರತ್‌ರವರು ಆಯ್ಕೆಯಾಗಿರುವರು. ಪದಾಧಿಕಾರಿಗಳಾಗಿ ಶ್ರೀ ಕುದುಕುಳಿ ಭರತ್, ಶ್ರೀ ಮೊಟ್ಟನ ದೇವಯ್ಯ, ಶ್ರೀ ನಡುಬೆಟ್ಟ ಅನಂತ, ಶ್ರೀ ಕೊಂಪುಳಿರ ಗಣೇಶ್, ಶ್ರೀ ಹುದೇರಿ ನಾಗೇಶ್, ಶ್ರೀ ಗುಡ್ಡೇರ ನಾಣಯ್ಯ, ಶ್ರೀ ಕುದುಪಜೆ ಚಿಣ್ಣಪ್ಪ, ಶ್ರೀ ಕೊಂಬನ ಗಣೇಶ್, ಶ್ರೀ ಅಂಚೆ ಸುಧಿ, ಶ್ರೀ ಜೈನೀರ ವೆಂಕಟೇಶ್, ಶ್ರೀ ಕುಟ್ಟನ ಮುತ್ತಪ್ಪ, ಶ್ರೀ ಕಾಳೇರಮ್ಮನ ದೇವಯ್ಯ, ಶ್ರೀ ಮುಕ್ಕಾಟಿ ಸತೀಶ್ ಶ್ರೀ ಕುಂಜಿಲನ ಜಿ. ಸುರೇಶ್, ಶ್ರೀ ಕುಂಭಗೌಡನ ರಂಜಿತ್, ಶ್ರೀಮತಿ ಮಂಞ್ಞಾಂಡ್ರ ರೇಖಾ ಉಲ್ಲಾಸ್, ಶ್ರೀಮತಿ ತೋಟಂಬೈಲು ಪ್ರೇಮಾ ಆನಂದ, ಶ್ರೀಮತಿ ನೆಯ್ಯೇಣಿ ಹೇಮಾವತಿ ಮತ್ತು ಕೊಡಗು ಸಂಗಾತಿ ಬಳಗದ ಶ್ರೀ ಪಟ್ಟಡ ಪ್ರಭಾಕರ್, ಶ್ರೀ ಪಟ್ಟಡ ಶಿವಕುಮಾರ್ ಹಾಗೂ ಕು|| ಗೀತಾ ಮೋಂಟಡ್ಕನವರನ್ನು ಆಯ್ಕೆ ಮಾಡಲಾಯಿತು.

ಅಲ್ಲದೆ ಮೇಲ್ಕಂಡ ಅಕಾಡೆಮಿಗೆ ಗೌ|| ಅಧ್ಯಕ್ಷರನ್ನಾಗಿ ಕೊಡಗು ಗೌಡ ವಿದ್ಯಾ ಸಂಘದ ಅಧ್ಯಕ್ಷರಾದ ಶ್ರೀ ಕುಯ್ಯುಮುಡಿ ಪೂರ್ಣಯ್ಯನವರನ್ನು ಮತ್ತು ಗೌ|| ಕಾರ್ಯದರ್ಶಿಯಾಗಿ ಸಂಘದ ಹಾಲಿ ಕಾರ್‍ಯದರ್ಶಿಯಾದ ಶ್ರೀ ಕೋಳುಮುಡಿಯನ ಅನಂತಕುಮಾರ್‌ರವರನ್ನು ಆಯ್ಕೆ ಮಾಡಲಾಯಿತು.

ಈ ಮೇಲ್ಕಂಡ ಸಮಿತಿಗೆ ಜನಾಂಗದ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಂಪೂರ್ಣ ಅಧಿಕಾರವನ್ನು ಕೊಡಲಾಯಿತು. ಕಾರ್ಯಕ್ರಮದ ಮೊದಲಿಗೆ ಶ್ರೀಮತಿ ರೇಖಾ ಉಲ್ಲಾಸ್‌ರವರಿಂದ ಪ್ರಾರ್ಥನೆ, ಸ್ವಾಗತವನ್ನು ವಿದ್ಯಾ ಸಂಘದ ಅಧ್ಯಕ್ಷರಾದ ಪೂರ್ಣಯ್ಯನವರು ಮಾಡಿದರು. ವೇದಿಕೆಯಲ್ಲಿ ಭಾಗಮಂಡಲ ಗೌಡಸಮಾಜದ ಅಧ್ಯಕ್ಷರಾದ ಶ್ರೀ ಕುದುಪಜೆ ಭೈರಪ್ಪನವರು, ಮಡಿಕೇರಿ ಗೌಡ ಸಮಾಜದ ಉಪಾಧ್ಯಕ್ಷರಾದ ಶ್ರೀ ಕೋರನ ಪೂಣಚ್ಚನವರು, ಕೊಡಗು ಗೌಡ ವಿದ್ಯಾ ಸಂಘ ಮೈಸೂರು ಶಾಖೆಯ ಅಧ್ಯಕ್ಷರಾದ ಶ್ರೀ ನೇಯ್ಯೇಣಿ ಕುಶಾಲಪ್ಪನವರು, ಕೊಡಗು ಗೌಡ ಮಹಿಳಾ ಒಕ್ಕೂಟದ ಅಧ್ಯಕ್ಷೆಯಾದ ಶ್ರೀಮತಿ ಚೇಯಂಡಿರ ರಾಧಯಾದವರವರು ಹಾಗೂ ಹಿರಿಯ ಸಮಾಜ ಸೇವಕ ಶ್ರೀ ಹೊಸೂರು ಜೋಯಪ್ಪನವರು ಉಪಸ್ಥಿತರಿದ್ದರು. ಕೊನೆಯಲ್ಲಿ ನಿರ್ದೇಶಕರಾದ ಶ್ರೀ ಪಟ್ಟಡ ಪ್ರಭಾಕರ್‌ರವರು ಗೌಡರ ಚರಿತ್ರೆಯನ್ನು ವಿವರಿಸುತ್ತಾ ಸರ್ವರಿಗೂ ವಂದನೆ ಸಲ್ಲಿಸಿದರು.

ಮಡಿಕೇರಿಯಲ್ಲಿ ಅರೆಭಾಷೆ ಸಾಂಸ್ಕೃತಿಕ ಕಾರ್ಯಕ್ರಮ (ಅರೆಭಾಷೆಗೆ ಮೊದಲ ಪ್ರಾಶಸ್ತ್ಯ)

ನಮ್ಮ ಪ್ರಾಚೀನವಾದ ಸಂಸ್ಕೃತಿಯನ್ನು ರಕ್ಷಿಸುವ ದಿಸೆಯಲ್ಲಿ ಸಂಚಿಕೆ 15ರಲ್ಲಿ ಪ್ರಕಟಿಸಿದ್ದಿತು. ಈ ನಿಟ್ಟಿನಲ್ಲಿ ಸಾಕಷ್ಟು ಉತ್ತಮ ಪ್ರತಿಕ್ರಿಯೆ ಕಂಡುಬಂದಿದೆ. ಜೊತೆಗೆ ಯುವಕ, ಯುವತಿಯರಿಗೆ ನಮ್ಮ ಸಂಸ್ಕೃತಿಯ ಬಗ್ಗೆ ಚರ್ಚೆ/ಭಾಷಣ, ಪ್ರಬಂಧ ಸ್ಪರ್ಧೆಗಳನ್ನು ಏರ್ಪಡಿಸಲು ಆಲೋಚಿಸಿದ್ದೇವೆ.

ಚರ್ಚೆ ವಿಷಯ :

1. ಗೌಡರ ಮದುವೆ ಪದ್ಧತಿಗಳು ಬೇಕೆ ಬೇಡವೆ ? 2. ಮದುವೆಯಲ್ಲಿ ಎಣ್ಣೆ ಅರಿಶಿನ ಶಾಸ್ತ್ರ ಅವಶ್ಯಕತೆ ಇದೆಯೋ ಇಲ್ಲವೊ ? 3. ಗೌಡರಲ್ಲಿ ದಿಬ್ಬಣ ಹೋಗಿ, ಹೆಣ್ಣು ತರುವ ಪದ್ಧತಿ ಒಳ್ಳೆಯದೇ ಅಥವಾ ದಂಪತಿ ಮುಹೂರ್ತ ಮದುವೆ ಒಳ್ಳೆಯದೆ ಇತ್ಯಾದಿಗಳು...

ಪ್ರಬಂಧ ಸ್ಪರ್ಧೆ :

ಗೌಡರ ಚರಿತ್ರೆ, ಗೌಡರಲ್ಲಿ ರಾಜಕೀಯ ವ್ಯಕ್ತಿಗಳು, ಗೌಡರಲ್ಲಿ ಸ್ವಾತಂತ್ರ ಹೋರಾಟಗಾರರು, ಈ ತರಹದಲ್ಲಿ ಅಧ್ಯಯನ ಮಾಡಿ ಸ್ಪರ್ಧಿಸಲು ಅವಕಾಶವಿದೆ.

ಆಸಕ್ತರಿಗೆ ಮುಂದೆ ಪತ್ರಗಳ ಮೂಲಕ ತಿಳಿಸಲಾಗುವುದಲ್ಲದೆ ಸಂಗಾತಿ ಪತ್ರಿಕೆಯು ವಿಷಯವನ್ನು ಪ್ರಸಾರ ಮಾಡುತ್ತದೆ. ಹೆಚ್ಚಿನ ವಿವರಗಳಿಗೆ ಪತ್ರ ಬರೆಯಿರಿ.

ಸಂಚಾಲಕರು,
C/o ಕೊಡಗು ಸಂಗಾತಿ, 322,
ಹಿನಕಲ್ ಗ್ರಾಮ, ಮೈಸೂರು-17

ದಿ॥ ಚೆಟ್ಟಿಮಾಡ ಅಮ್ಮವ್ವ ಪೊನ್ನಪ್ಪ

ಮಡಿಕೇರಿ ತಾ॥ ಭಾಗಮಂಡಲನಾಡು ಸಣ್ಣ ಪುಲಿಕೋಟು ಗ್ರಾಮದ ಕುಯ್ಯ್ಯುಮುಡಿ ಮುಂದಣ್ಣ ಮತ್ತು ಪೂವಮ್ಮ ದಂಪತಿಗಳ 2 ಗಂಡು, 3 ಹೆಣ್ಣು ಮಕ್ಕಳಲ್ಲಿ ಪ್ರಥಮ ಪುತ್ರಿಯಾಗಿ 1914ರ ಸುಮಾರಿಗೆ ಜನಿಸಿದರು. ಮೊದಲ ಪುತ್ರ ಪೂವಯ್ಯ ಭಾರತೀಯ ಸೇನೆಯಲ್ಲಿದ್ದು, ಮಾದರಿ ರೈತನಾಗಿ ತನ್ನ ಗ್ರಾಮದಲ್ಲಿ ನೆಲೆಯೂರಿದರೆ 2ನೇ ಮಗ ಮಾಚಯ್ಯ ಸಹ ತನ್ನಣ್ಣನ ಹಾಗೆಯೇ ಸೇನೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿಯಾಗಿ ಮೈಸೂರಿನಲ್ಲಿ ನೆಲೆಸಿದ್ದಾರೆ. 2ನೇ ಮಗಳು ಸೀತಮ್ಮ ಬಾಡಗ ಗ್ರಾಮದ ಕೈಬಿಲಿರ ಚಿಣ್ಣಪ್ಪನವರನ್ನು ವಿವಾಹವಾಗಿದ್ದಾರೆ. 3ನೇ ಮಗಳು ಮುತ್ತಮ್ಮ, ಭಾಗಮಂಡಲದ ಸೂರ್ತಲೆ ಕುಟುಂಬದ ರಾಮಪ್ಪನವರನ್ನು ವಿವಾಹವಾಗಿದ್ದಾರೆ. ಅಮ್ಮವ್ವ ಚೆಟ್ಟಿಮಾಡ ಮನೆತನದ ಪೊನ್ನಪ್ಪನವರನ್ನು 1939ರಲ್ಲಿ ವಿವಾಹವಾದರು.

ಅಮ್ಮವ್ವನವರು ತನ್ನ ಜೀವನದಲ್ಲಿ ಶಾಲೆಯನ್ನೇ ನೋಡಿಲ್ಲವಾದರು ಸಹಿ ಮಾಡಲಷ್ಟೆ ಕಲಿತವರು. ಕಡು ಬಡತನದಲ್ಲಿ ಜೀವನ ಸಾಗಿಸುತ್ತಿರುವ ಸಂದರ್ಭದಲ್ಲಿ ತನ್ನ ಪತಿ ಪೊನ್ನಪ್ಪನವರನ್ನು 1945ರಲ್ಲಿ ಕಳಕೊಂಡ ಇವರಿಗೆ ಇಬ್ಬರು ಗಂಡುಮಕ್ಕಳು. ಮೊದಲನೆಯವ ಕೃಷ್ಣಪ್ಪನಾದರೆ, 2ನೇ ಮಗನೇ ರಘುಪತಿ. ಈಗಿನ ಮಡಿಕೇರಿಯ ಗೌಡ ಸಮಾಜದ ಮ್ಯಾನೇಜರ್. ಮಕ್ಕಳನ್ನು ಕಟ್ಟಿಕೊಂಡು ಜೀವನವನ್ನು ಹೊದ್ದೂರಿನಲ್ಲಿ ಸಾಗಿಸುತ್ತಿದ್ದಾಗ ಚೆಟ್ಟಿಮಾಡ ಕುಟುಂಬದ ಹಿರಿತಲೆಗಳ ಸಲಹೆ ಮೇರೆ 1959ರಲ್ಲಿ ಮಡಿಕೇರಿಗೆ ಬಂದು ನೆಲೆಸುವಂತಾಯಿತು. ಮಡಿಕೇರಿಯಲ್ಲಿ ಬಾಡಿಗೆ ಮನೆಯಲ್ಲಿದ್ದುಕೊಂಡೇ ಮಹಿಳಾ ವಸತಿ ಗೃಹಗಳ ಅವಶ್ಯಕತೆ ಕಂಡು ಬಂದ ಹಿನ್ನೆಲೆಯಲ್ಲಿ ತನ್ನ ಮನೆಯನ್ನೇ ಬಾಡಿಗೆ ವಸತಿ ಗೃಹವನ್ನಾಗಿ ಪರಿವರ್ತಿಸಿ ಇಲ್ಲಿಯೇ ಊಟದ ವ್ಯವಸ್ಥೆಯನ್ನು ಮಾಡಿದರು. ತನ್ನ ಮಕ್ಕಳಿಗೆ ಮಾತ್ರವಲ್ಲದೆ, ಜನಾಂಗದ ಮಕ್ಕಳಿಗೆ ಆಸ್ಪದ ಕಲ್ಪಿಸಿದರು. ನಂತರ ಪಾಂಡನ



ಅಮ್ಮವ್ವ ಪೊನ್ನಪ್ಪ

ಸುಬ್ಬಯ್ಯ ದಿ ಚೆರಿಯಮನೆ ಪೊನ್ನಪ್ಪನವರ ಕೃಪಾಕಟಾಕ್ಷದಿಂದ ಅಂದು ಮಡಿಕೇರಿಯಲ್ಲಿ ಕೆಳಗಿನ ಗೌಡ ವಿದ್ಯಾರ್ಥಿನಿಲಯದ ವಾರ್ಡನ್ ಆಗಿ 1959ರಲ್ಲಿ ನೇಮಕವಾದರು. ಇವರೇ ಪ್ರಪ್ರಥಮ ಸ್ಥಾಪಕ ವಾರ್ಡನ್ ಸಹ ಹೌದು. 1959ರಿಂದ 1975ರತನಕ 16 ವರ್ಷಗಳ ಅವಿರತ ಸೇವೆಯನ್ನು ಜನಾಂಗದ ಮಹಿಳಾ ಮಕ್ಕಳಿಗೆ ದಕ್ಷ, ನಿಷ್ಠೆ, ಪ್ರಾಮಾಣಿಕವಾಗಿ ದುಡಿದಿದ್ದಾರೆ. ಮಕ್ಕಳಿಗೆ ಉತ್ತಮ ಮಾರ್ಗದರ್ಶನ ನೀಡುತ್ತಿದ್ದರಲ್ಲದೆ, ಕಷ್ಟದಲ್ಲಿದ್ದ ಮಕ್ಕಳಿಗೆ ತಮ್ಮ ಕೈಲಾದ ಅಳಿಲು ಸಹಕಾರವನ್ನು ನೀಡುತ್ತಾ, ಅಂದಿನ ದಿನದಲ್ಲಿ ಮಹಿಳಾ ಹಾಸ್ಟೆಲ್‌ನಲ್ಲಿ ಯಾವುದೇ ಅವ್ಯವಹಾರಗಳಿಗೆ ಆಸ್ಪದ ಕೊಡದ ಅಮ್ಮವ್ವ ಶಿಸ್ತಿನ, ನಿಯತ್ತಿನ ಅಮ್ಮವ್ವಜ್ಜಿಯಾಗಿ ಸರ್ವರ ಪ್ರಶಂಸೆಗೆ ಪಾತ್ರರಾಗಿದ್ದರು.

ಅಮ್ಮವ್ವನವರು ತಮ್ಮ ಜನಾಂಗದ ಮದುವೆಯಲ್ಲಿ ಹಾಡುವ ಶೋಭಾನೆ ಪದಗಳನ್ನು ಎತ್ತರದ ಸ್ವರದಲ್ಲಿ ನಿರರ್ಗಳವಾಗಿ ಹಾಡುತ್ತಿದ್ದ ದಾಟಿಯೇ ಇಂದು ಅವರ ಶೋಭಾನೆಗಳ ಸಂಗ್ರಹಗಳನ್ನು ಗೌಡ ಸಮಾಜದ ಪುಸ್ತಕದಲ್ಲಿ ಈಗಲೂ ಕಾಣಬಹುದು. ಈ ರೀತಿಯ ಶೋಭಾನೆಗಳ ಪದಪುಂಜಗಳಲ್ಲಿ ಇವರದೇ ಮೊದಲ ಸೇವೆ ಅನ್ನಬೇಕು. ಅವಿದ್ಯಾವಂತೆಯಾಗಿದ್ದರೂ ತನ್ನ ಚುರುಕುತನದಿಂದ ಸಾಂಪ್ರದಾಯಿಕ ಶೋಬಾನೆಯನ್ನು ಏರು ಸ್ವರದಲ್ಲಿ ಹಾಡುತ್ತಿದ್ದುದು ಸ್ಮರಣೀಯ ವಿಚಾರ. ತುಂಬು ಗೌಡ ಅಭಿಮಾನಿಯಾದ ಈ ಮಹಿಳಾ ಮಣಿಯ ಸ್ಮರಣೀಯ ವ್ಯಕ್ತಿತ್ವವು ನೋಡುವವರ ಕಣ್ಣಿಗೆ ಸ್ವಲ್ಪ ಅಳುಕು ಹುಟ್ಟಿಸುವ ಗಂಭೀರವದನೆಯೇ ಈ ಅಮ್ಮವ್ವಜ್ಜಿ. ತನ್ನ ಈ ಹಾಡುಗಳನ್ನು ವಸತಿಗೃಹದ ಕಿಶೋರಿಯರು ಕಡ್ಡಾಯವಾಗಿ ಹಾಡುವ ಪದ್ಧತಿಯನ್ನು ಪ್ರತಿದಿನ ರೂಢಿಸಿಕೊಂಡಿದ್ದರು. ಆದ್ದರಿಂದ ಮದುವೆ ಮುಂಜಿ ಸಂದರ್ಭಗಳಲ್ಲಿ ಹಾಡುವ ಪರಿಪಾಠದ ಪ್ರವರ್ತತೆಯ ನಿಪುಣತೆಯಾಗಿದ್ದರು.

ಸಮಾಜ ಸೇವೆಯಲ್ಲಿಯು ಸಹ ಇವರು ಕಡಿಮೆ ಏನಿಲ್ಲ ಹಲವು ಸಂದರ್ಭದಲ್ಲಿ ಅಕ್ಕಿ ಸಿಗದೇ ಇದ್ದ ಸಂದರ್ಭದಲ್ಲಿ ಗೋಣಿಕೊಪ್ಪಲಿನಿಂದ ಅಕ್ಕಿ ತಂದು ಮಕ್ಕಳಿಗೆ ಊಟದ ವ್ಯವಸ್ಥೆ ಮಾಡಿದ ನಿದರ್ಶನವು ಇದೆ. ಚಿಕ್ಕ ಸಂಬಳದಲ್ಲಿ 16 ವರ್ಷಗಳ ಚೊಕ್ಕ ಸೇವೆ ಸಲ್ಲಿಸಿ ಯಾವುದೇ ರೀತಿಯ ಪರಿಹಾರ ಧನ ಪಡೆಯದೆ ತನ್ನ ಗೌರವಕ್ಕೆ ಧಕ್ಕೆ ಬಾರದಂತೆ ಅತೀ ಕಷ್ಟದಲ್ಲಿದ್ದುಕೊಂಡೆ ನಿವೃತ್ತಿಯಾದರೆಂದು ಮಕ್ಕಳು ಹೇಳುತ್ತಾರೆ. 1994ರಲ್ಲಿ ಸ್ವರ್ಗಸ್ಥರಾದ ಇವರ ಸಮಾಜ ಸೇವೆಯನ್ನು ಪ್ರಾಥಮಿಕ ಮಟ್ಟದಲ್ಲಿ ಗುರುತಿಸಿಕೊಂಡಾಗ ಸಂಗಾತಿಗೆ ಏನೋ ಒಂದು ತರದಲ್ಲಿ ನೆಮ್ಮದಿ. ಇವರ ಆದರ್ಶ ಮಾರ್ಗದರ್ಶನವು ಕಿರಿಯರಿಗೆ ಲಭಿಸಲೆಂಬುವುದೇ ಈ ಲೇಖನದ ಉದ್ದೇಶ. ○

ಮೇರಾ ಭಾರತ್ ಮಹಾನ್

'ಮೇರಾ ಭಾರತ್ ಮಹಾನ್' ಎಂದು ಗಾಂಧೀಜಿ ಹೇಳಿದ ಮಾತಿದು. ಸತ್ಯ ಶಾಂತಿ, ತ್ಯಾಗಗಳಲ್ಲಿ ಗಾಂಧೀಜಿ ಬೆಳಗಿದ ನಾಡು ಭಾರತ. ಆದರೆ ಇಂದಿನ ರಾಜಕಾರಣಿಗಳು 'ಮೇರಾ ಭಾರತ್ ಮಹಾನ್' ಎಂದು ಬಾಯಿ ಮಾತಿಗೆ ಹೇಳುತ್ತಾರೆ. ಏಕೆಂದರೆ ಇಂದಿನ ಹಗರಣಗಳಲ್ಲಿ ಸಿಕ್ಕಿ ಜೈಲುಕಂಬಿ ಎಣಿಸಲು ಸಿದ್ಧರಾಗುವ ರಾಜಕಾರಣಿಗಳಿಗೂ, ರಾಷ್ಟ್ರಭಕ್ತ ಗಾಂಧೀಜಿಗೂ

ಗುಡ್ಡೇರ ವನಮಾಲ, ಮೈಸೂರು

ವ್ಯತ್ಯಾಸ ಇದೆ. ಅಂದು ದೇಶಕ್ಕಾಗಿ ದೇಶಭಕ್ತರು ಜೈಲುವಾಸ ಅನುಭವಿಸಿದರೆ, ಇಂದು ರಾಜಕಾರಣಿ ಮಾನ, ಮರ್ಯಾದೆ, ಇಲ್ಲದ ಆಡಂಬರದ ಜೀವನ ನಡೆಸುವುದರಿಂದ ಜೈಲುವಾಸ ಅನುಭವಿಸುತ್ತಾನೆ.

ದೇಶದ ಸಂಪತ್ತನ್ನು ಯಾವುದೇ ಅಭಿವೃದ್ಧಿ ಕಾರ್ಯಕ್ಕೆ ಬಳಸದೆ ಅಧಿಕಾರದಲ್ಲಿರುವ ರಾಜಕಾರಣಿಗಳು ಬೇಕಾಬಿಟ್ಟಿಯಾಗಿ ಸಂಪತ್ತನ್ನು ದೋಚಿದರೆ ದೇಶದ ಪರಿಸ್ಥಿತಿ ಸುಧಾರಿಸುವುದು ಹೇಗೆ ಸಾಧ್ಯ? ಇಂದು ರಾಜಕೀಯ ಯಾವ ಮಟ್ಟದಲ್ಲಿ ಸಾಗಿದೆ ಎಂದು ನೋಡಿದರೆ ಬೇಸರ ಉಂಟಾಗುತ್ತದೆ. ದಿನ ದಿನ ಒಡೆಯುತ್ತಿರುವ ರಾಜಕೀಯ ಪಕ್ಷಗಳು. ಖಾಲಿ ಖಜಾನೆ, ಹೊರಲಾಗದ ಸಾಲದ ಹೊರೆ. ಹೀಗಿರುವಾಗ ನಮ್ಮ ದೇಶ ಎಲ್ಲಿ ಸುಧಾರಿಸುವುದು. ಸಾಮಾನ್ಯ ನಾಗರೀಕನಿಂದ ಹಿಡಿದು ನಾಯಕರವರೆಗೆ ಅವಕಾಶ ಸಿಕ್ಕಾಗ ಏಕೆ ದೋಚಬಾರದು? ಎಂಬ ಕುತಂತ್ರ ಅವರ ಮನಸ್ಸಿನಲ್ಲಿ ಬೆಳೆಯುತ್ತದೆ. ಈಗಿನ ರಾಜಕಾರಣಿಗಳಲ್ಲಿ ಸ್ವಾರ್ಥ ತುಂಬಿಕೊಂಡಿದೆ.

ಪ್ರತಿಯೊಂದು ಪಕ್ಷವೂ ಹಗರಣಗಳನ್ನು ಸೃಷ್ಟಿಸುತ್ತಲೇ ಜನ್ಮ ತಳೆಯುತ್ತದೆ. ಈಚೆಗೆ ಕೇಂದ್ರದ ಹಲವಾರು ಮಾಜಿ ಮಂತ್ರಿಗಳ ಮತ್ತು ಹಲವಾರು ಅಧಿಕಾರಿಗಳ ಮನೆಯ ಮೇಲೆ ಸಿ. ಬಿ. ಐ. ಧಾಳಿ ಮಾಡಿ ಕೋಟ್ಯಾಂತರ ರೂಪಾಯಿ ನಗದು ಹಣ ಇತರೆ ದಾಖಲೆಗಳನ್ನು ವಶಪಡಿಸಿಕೊಂಡ ಸುದ್ಧಿ ಕೇಳಿದರೆ ಬೇಸರವಾಗುತ್ತದೆ. ನಮ್ಮ ದೇಶದಲ್ಲಿ ಹಗರಣಗಳ ಪಟ್ಟಿ ದಿನದಿಂದ ದಿನಕ್ಕೆ ಬೆಳೆಯುತ್ತ ಹೋಗುತ್ತದೆ. ಇದಕ್ಕೆಲ್ಲ ಅತಿ ಆಸೆಯೇ ಮೂಲ. ಅದಿಕಾರದಲ್ಲಿದ್ದಾಗ ನಾನೆಷ್ಟು ಜಮೀನು, ಮನೆ ಕೊಳ್ಳಬಹುದು. ಎಷ್ಟು ಷೇರ್ಸ್ ಕೊಂಡುಕೊಳ್ಳಬಹುದು, ವಿದೇಶಕ್ಕೆ ಸರ್ಕಾರಿ ಖರ್ಚಿನಲ್ಲಿ ಎಷ್ಟು ಬಾರಿ ಹೋಗಬಹುದು ಎಂದು ಲೆಖ್ಖಾಚಾರ ಹಾಕುವವರೇ ಇಂದು ಜಾಸ್ತಿಯಾಗಿದ್ದಾರೆ.

ಈ ಎಲ್ಲ ವ್ಯಕ್ತಿಗಳನ್ನು ಸಾಮಾನ್ಯ ವ್ಯಕ್ತಿಗಳಂತೆ ಬಂಧಿಸುವುದೇನೋ ಸತ್ಯ. ಆದರೆ ಜೈಲಿನೊಳಗೆ ಅವರಿಗೆ ಎಲ್ಲಾ ಬಗೆಯ ವಿ.ಐ.ಪಿ. ಸೌಲಭ್ಯವನ್ನು ಒದಗಿಸುತ್ತಾರೆ. ಕೇವಲ ಹೊಟ್ಟೆಪಾಡಿಗೋಸ್ಕರ ಕದ್ದು ಜೈಲು ಸೇರಿ ಜೀವಮಾನವಿಡೀ ಅಲ್ಲೇ ಕೊಳೆಯುವವರು ನಮ್ಮ ದೇಶದಲ್ಲಿ ಅನೇಕ ಮಂದಿ ಇರುವಾಗ, ಕೋಟಿ ಕೋಟಿ ಹಣವನ್ನು ನುಂಗಿಹಾಕಿ ಜೈಲು ಸೇರಿದವರಿಗೆ ಯಾವ ಶಿಕ್ಷೆಯನ್ನು ಕೊಡದೆ ಅಲ್ಲಿ ಅವರಿಗೆ ವಿ.ಐ.ಪಿ. ಸೌಲಭ್ಯ ನೀಡುವುದು ಯಾವ ನ್ಯಾಯ? ಇವರುಗಳು ನಮ್ಮ ದೇಶದ ಪ್ರಜೆಗಳಲ್ಲವೇ? ಇಂದು ನಮ್ಮ ದೇಶ ಹೊರಲಾಗದ ಸಾಲದ ಹೊರೆಯನ್ನು ಹೊತ್ತುಕೊಂಡಿದೆ. ಮಿತಿ ಮೀರಿದ ವಿದೇಶಿ ಸಾಲದಲ್ಲಿ ತೇಲಾಡುತ್ತಿದೆ. ದೇಶದ ಎಲ್ಲಾ ಯೋಜನೆಗಳಿಗೂ ವಿದೇಶಿ ನೆರವನ್ನು ಪಡೆಯುತ್ತಿದೆ. ಈ ಭಾರತದಲ್ಲಿ ಒಂದು ಹೊತ್ತಿನ ಊಟಕ್ಕೂ ಗತಿಯಿಲ್ಲದವರನ್ನು, ಮನೆಯಿಲ್ಲದವರಿಗೆ ಮನೆಯನ್ನು, ನಿರುದ್ಯೋಗಿಗಳಿಗೆ ಉದ್ಯೋಗವನ್ನು ನೀಡಲು ಇನ್ನು ಸಾಧ್ಯವಾಗಿಲ್ಲ. ಇದಾವುದರ ಚಿಂತೆ ಇಲ್ಲದೆ ಯಾವಾಗಲು ಅಧಿಕಾರಕ್ಕಾಗಿ ಕಚ್ಚಾಡುತ್ತ, ಅಧಿಕಾರಕ್ಕೆ ಬಂದ ಮೇಲೆ ದೇಶದ ಸಂಪತ್ತನ್ನು ಲೂಟಿ ಹೊಡೆಯುವ ಸ್ವಾತಂತ್ರ್ಯ ಈಗಿನ ರಾಜಕಾರಣಿಗಳಿಗಿದೆ.

ಇದುವರೆಗೂ ಹಗರಣಗಳ ಮಾಲೆಯೇ ಆಗಿ ಹೋಗಿದೆ. ಬೋಫೋರ್ಸ್, ಹವಾಲ, ಸೈಂಟ್‌ಕಿಟ್ಸ್, ಯೂರಿಯ, ಮೇವು, ಪಾಠಕ್, ಇಲ್ಲಿಯ ತನಕ ನಡೆದ ಎಲ್ಲಾ ಹಗರಣಗಳನ್ನು ನೋಡಿದರೆ ನಮ್ಮ ದೇಶ ಹಗರಣಗಳಲ್ಲಿಯೇ ಕೊನೆಗೊಳ್ಳುವುದು ಖಂಡಿತ. ಸದ್ಯಕ್ಕಂತೂ ಭಾರತದ ಪರಿಸ್ಥಿತಿ ತೂಗುಯ್ಯಾಲೆಯಲ್ಲಿಯೇ ಇದೆ. ಇದೇ ಇಂದಿನ ನಮ್ಮ ನಿಮ್ಮೆಲ್ಲರ 'ಮೇರಾ ಭಾರತ್ ಮಹಾನ್.'

ಚುಟುಕಗಳು

ಎಲ್ಲರಂಥವರಲ್ಲ ನನ್ನ ಗಂಡ
ಕುಡಿದಾಗ ಪ್ರಶ್ನಿಸಿದರೆ
ತೆಗೆಯಲು ಬರುವರು
ನನ್ನ ರುಂಡ.

ಸಿಗರೇಟು ಆರೋಗ್ಯಕ್ಕೆ ಹಾನಿಕರ
ಆದರೂ ಸೇದಿದರೆ
ಹೋಗುವಿರಿ ಬೇಗ
ಯಮುನ ಹತ್ತಿರ.

ಸತಿ ಪತಿ ಒಟ್ಟಿಗಿದ್ದರೆ ಜೀವನ
ಬೇರೆ ಬೇರೆ ಇದ್ದರೆ
ಜೀವನವೆಲ್ಲಾ ಏಕಾಂತವಾಗಿ
ಕಳ್ಳರ ಕೈಗೆ ಸಿಕ್ಕ ವಿಮಾನ.

● **ಮುಕ್ಕಾಟ ಲತಾ ತಿಮ್ಮಯ್ಯ,**
ಮೈಸೂರು.

ಬೆಂಗಳೂರಿನ ಕೊಡಗು ಗೌಡ ಯುವಕ ಸಂಘದ ಒಂದು ವರದಿ

ಬೆಂಗಳೂರಿನ ಕೊಡಗು ಗೌಡ ಸಮಾಜವು ಪ್ರಾರಂಭವಾಗಿ ಎರಡು ದಶಕಗಳೇ ಕಳೆದಿವೆ. 1996 ಅಕ್ಟೋಬರ್ 26ರಂದು ಈ ಸಮಾಜದಲ್ಲಿ ಯುವಕ ಸಂಘವು ಸುರುವಾಯಿತು. ಇದರ ಸ್ಥಾಪಕರು ಉತ್ಸಾಹದಿಂದ ಕಾರ್ಯ ನಿರ್ವಹಿಸುವ 50 ಜನ ತರುಣರು. ಈ ಸಂಘವು ತನ್ನ ಮೊದಲನೆಯ ವಾರ್ಷಿಕೋತ್ಸವವನ್ನು 2–10–97 ರಂದು ಆಚರಿಸಿತು. ಈ ಸಮಾರಂಭದಲ್ಲಿ ಗೌಡ ಬಾಂಧವರ ಪ್ರತಿಭೆಯುಳ್ಳವರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಜೆಯ ವೇಳೆಯಲ್ಲಿ ನೀಡಲಾಯಿತು.

ಚರ್ಚಾಸ್ಪದವಾದ ಮತ್ತು ಪರಸ್ಪರ ಸಾಮರಸ್ಯದ ಉದ್ದೇಶದಿಂದ ಒಳಗೊಂಡ ಕಾರ್ಯಕ್ರಮಗಳು ಈ ವರ್ಷದಲ್ಲಿ ಹಮ್ಮಿಕೊಳ್ಳಲಾಯಿತು. ಈ ಸಂಘವು ಹಮ್ಮಿಕೊಂಡಿರುವ ಕಾಯಕ್ರಮಗಳ ಸಫಲತೆಗಾಗಿ ತೆಗೆದುಕೊಂಡಿರುವ ಉದ್ದೇಶವು ಬೆಂಗಳೂರು ಗೌಡ ಸಮುದಾಯದವರ ಮೆಚ್ಚುಗೆಗೆ ಪಾತ್ರವಾಗುವಂತೆ ಮಾಡಿತು. ಆ ಕಾರ್ಯಕ್ರಮದಲ್ಲಿ ಕೆಳಗಿನ ವಿಚಾರಗಳು ಮತ್ತು ಸಫಲತೆಗಳು ಹೀಗಿವೆ.

1. ನಮ್ಮನ್ನು ನಾವು ಹೆಚ್ಚು ಯೋಗ್ಯರನ್ನಾಗಿಯೂ ಮತ್ತು ದಕ್ಷತೆಯುಳ್ಳವರನ್ನಾಗಿ ಪರಿವರ್ತಿಸುವುದು.

2. ರಕ್ತ ದಾನದ ಕೇಂದ್ರವನ್ನು ಸ್ಥಾಪಿಸಿ, ರಕ್ತದಾನವನ್ನು ಮಾಡುವ ದಾನಿಗಳ ಪಟ್ಟಿ ತಯಾರಿಸಿ, ತುರ್ತು ಸಮಯದಲ್ಲಿ ಈ ಸಮುದಾಯದ ಜನರಿಗೆ ರಕ್ತ ನೀಡುವುದು

3. ಈ ಸಮುದಾಯದಲ್ಲಿ ಉಂಟಾಗುವ ಕುಂದು–ಕೊರತೆಗಳನ್ನು ಪತ್ತೆಹಚ್ಚಿ ಅದಕ್ಕೆ ತಕ್ಕ ಪರಿಹಾರವನ್ನು ವೈಯುಕ್ತಿಕ ಹಾಗೂ ಪರೋಕ್ಷವಾಗಿ ನೀಗಿಸುವುದು.

4. ಈ ಸಮುದಾಯದ ಜೀವನದ ಅಭಿವೃದ್ಧಿಗೆ ಹಾಗೂ ಜವಾಬ್ದಾರಿಯುತ ಹೊಂದಾಣಿಕೆ ಬರುವಂತೆ ವೃದ್ಧಿಪಡಿಸುವಿಕೆ

5. ಸಮುದಾಯದ ಚಟುವಟಿಕೆಗಳಲ್ಲಿ ಕ್ರಿಯಾತ್ಮಕ / ಕಲಾತ್ಮಕವಾಗಿ ಭಾಗವಹಿಸಲು ಪ್ರೇರೆಪಿಸುವುದು.

6. ಬೆಂಗಳೂರಿನಲ್ಲಿ ನೆಲೆಸಿರುವ ಕೊಡಗು ಗೌಡ ಪರಿವಾರದವರ ಪಟ್ಟಿಯನ್ನು ತಯಾರಿಸಿ, ಪ್ರತಿಯೊಂದು ಕುಟುಂಬದ ಸದಸ್ಯರ ಸಂಖ್ಯೆಯನ್ನು ಹಾಗೂ ಸಂಕ್ಷಿಪ್ತ ವಿವರಗಳನ್ನು ಹೊಂದುವುದು.

ಮೊದಲನೆ ಕಾರ್ಯಕ್ರಮವು ಶೈಕ್ಷಣಿಕ ಸ್ಥಳಗಳಿಗೆ ಪ್ರವಾಸವನ್ನು ಹಾಗೂ ಇತರ ಚಟುವಟಿಕೆಗಳನ್ನು ಪ್ರಾರಂಭಿಸಲಾಯಿತು. ಎಲ್ಲಾ ಪ್ರವಾಸಗಳಲ್ಲಿಯೂ ಹೆಚ್ಚು ಮನರಂಜನೆ, ಉತ್ಸಾಹ ಮುಂತಾದವು ಸರ್ವರಲ್ಲೂ ತುಂಬಿ ತುಳುಕುತ್ತಿತ್ತು. ಇವರಲ್ಲಿ ಪರಸ್ಪರ ಸಹಕಾರ, ತಿಳುವಳಿಕೆ, ಸಹಬಾಳ್ವೆ ಸಹಾಯ, ಭಾಗವಹಿಸುವುದರಲ್ಲಿ ಹೊಂದಾಣಿಕೆ ಕಂಡುಬರುತ್ತಿತ್ತು.

ಕಾರ್ಯಕ್ರಮದ ಮುಂದಿನ ಕ್ರೀಡಾಕೂಟ ಈ ಸಮುದಾಯದ ಚರಿತ್ರೆಯಲ್ಲಿಯೇ ಮೊದಲನೆಯದು ಮತ್ತು ಅದ್ಭುತವಾದುದು. ಈ ಕಾರ್ಯಕ್ರಮದಲ್ಲಿ ಜನರು ವರ್ಗ ಭೇದವಿಲ್ಲದೆ ಅತ್ಯಂತ ಹುರುಪಿನಿಂದ ಭಾಗವಹಿಸಿದ್ದರು. ಸ್ಪರ್ಧಾತ್ಮಕವಾದ ಭಾವನೆಯು ಎಲ್ಲರಲ್ಲಿಯೂ ತುಂಬಿತ್ತು. ಈ ಕ್ರೀಡೆಗಳಲ್ಲಿ 50 ಕ್ಕಿಂತ ಹೆಚ್ಚು ಸ್ಪರ್ಧೆಗಳಿದ್ದವು ಮತ್ತು 175 ಕ್ಕಿಂತ ಹೆಚ್ಚು ಬಹುಮಾನಗಳನ್ನು ವಿತರಿಸಲಾಯಿತು. ಇದು ಪ್ರಥಮ ಯಶಸ್ವಿಯಾಗಿ ಹೆಚ್ಚು ಪರಿಣಾಮಕಾರಿಯಾಗಿತ್ತು.

"ನಿಮ್ಮ ಮನಸ್ಸು ಹೊಂದಿದ್ದೆ ಆದರೆ, ನಿಮ್ಮ ಹೃದಯ ನಂಬಿದ್ದೆ ಆದರೆ, ನೀವು ಯಾವುದನ್ನಾದರೂ ಪಡೆಯಬಹುದು".

"ಕೆಲವರು ವಿಚಾರಗಳನ್ನು ಅವುಗಳಿರುವಂತೆಯೇ ನೋಡುತ್ತಾರೆ ಮತ್ತು ಏಕೆಂದು ಕೇಳುತ್ತಾರೆ. ಆದರೆ ಕೆಲವರು ಇಲ್ಲದಿರುವಂತಹ ವಿಚಾರಗಳನ್ನು ಕನಸ್ಸಿನಲ್ಲಿ ಕಂಡು ಏತಕ್ಕೆ ಆಗಬಾರದು ಎನ್ನುವರು" –

ರಾಬರ್ಟ್ ಎಫ್. ಕೆನಡಿ

ಗಂಡಸರಿಗೆ ಕ್ರಿಕೇಟ್ ಮ್ಯಾಚ್, ಹೆಂಗಸರಿಗೆ ಥ್ರೋಬಾಲ್, ಟೆನ್ನಿ ಕಾರ್ಟ್‌ಗಳಿದ್ದವು

ಈ ತರುಣ ಸಂಘವು ಯಶಸ್ವಿಯಾಗಿ ರಕ್ತದಾನ ಕೇಂದ್ರ, ವಿವಾಹದ ಅಂಕಣ, ಉದ್ಯೋಗಾವಕಾಶದ ಸಲಹಾ ಕೇಂದ್ರಗಳನ್ನು ಸ್ಥಾಪಿಸಿದವು.

ವರ್ಷದ ಕೊನೆಯ ಕಾರ್ಯಕ್ರಮವು ವರ್ಣರಂಜಿತ ಸಾಂಸ್ಕೃತಿಕ ಕಾರ್ಯಕ್ರಮಗಳಾಗಿದ್ದವು. ಇದರಲ್ಲಿ ತರುಣ ತರುಣಿಯರಿಗೆ, ಇವರಲ್ಲಿ ಹುದುಗಿಟ್ಟ ಪ್ರತಿಭೆಗಳನ್ನು ಇದುವರೆಗೂ ತೋರಿಸಲು ಅವಕಾಶ ಸಿಗದೆ ಇದ್ದ ಪ್ರತಿಭೆಗಳು ಬೆಳಕಿಗೆ ಬರುವುದಕ್ಕೆ ಅವಕಾಶವಾಯಿತು. ಇದು ಒಂದು ಸಂಗೀತದ ಹಬ್ಬವಾಗಿತ್ತು. (ವ್ಯಕ್ತಿಗತ ಮತ್ತು ಸಾಮೂಹಿಕ) ಭರತನಾಟ್ಯ, ಡಿಸ್ಕೊ ನೃತ್ಯ ಜಾನಪದ ನೃತ್ಯ, ವರ್ಣರಂಜಿತ ವೇಷಭೂಷಣಗಳು ಹಾಗೂ ಇವೆಲ್ಲಕ್ಕಿಂತಲೂ ರಾಷ್ಟ್ರಮಟ್ಟದ ಪ್ರತಿಭೆಯಾಗಿರುವ ಕು|| ಗೀತಾ ಮೋಂಟಡ್ಕರವರಿಂದ ಅಣಾಕು ಕಾರ್ಯಕ್ರಮವು ಸರ್ವರನ್ನು ಮೆಚ್ಚಿಸಿತು.

ಸಂಘವು 97–98ರ ಸಾಲಿನಲ್ಲಿ ಇನ್ನೂ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ. ಈ ಕಾರ್ಯಕ್ರಮಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಓದುವ ವಿದ್ಯಾರ್ಥಿಗಳಿಗೆ ತರಬೇತಿ, ವ್ಯಕ್ತಿತ್ವದ ವಿಕಾಶ, ಇತರರೊಂದಿಗೆ ವ್ಯವಹಾರ ಜ್ಞಾನ, ಪ್ರಬಂಧ ಚಿಕ್ಕ ಮಕ್ಕಳಿಗೆ ಸ್ಥಳದಲ್ಲಿಯೆ ಚಿತ್ರಸ್ಪರ್ಧೆ, ಪೆನ್ಸಿಲಿನ ರೇಖಾಚಿತ್ರ ಮುಂತಾದವು ನಡೆಯುತ್ತವೆ. ಮುಂಬರುವ ವರ್ಷಗಳಲ್ಲಿ ಪ್ರಗತಿಹೊಂದುವ ಅಭಿಲಾಷೆ ಇಟ್ಟುಕೊಂಡಿದೆ.

"ನಾವು ಈ ಯುವಕರ ಸಂಘದ ಸದಸ್ಯರುಗಳ, ಮಹಾಪುರುಷರ ಶ್ರೇಷ್ಠ ನುಡಿಗಳ ಮಾರ್ಗದರ್ಶನದಲ್ಲಿ ನಡೆಯಲು ಬದ್ಧರಾಗಿರುತ್ತೇವೆ.

○ **ಡಾ|| ಕೆ. ಎಂ. ಬೆಳ್ಯಪ್ಪ,** ಬೆಂ.

ಟೀಕೆ–ಟಿಪ್ಪಣಿ

ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ–ಪ್ರತಿಕ್ರಿಯೆ

ಮಡಿಕೇರಿಯ ಕೊಡಗು ವಿದ್ಯಾ ಸಂಘದ ಚೌಕಟ್ಟಿನಲ್ಲಿ ಗೌಡಸಂಸ್ಕೃತಿ ಅಭಿವೃದ್ಧಿಯ ಮುಕ್ತ ಚರ್ಚಾಕೂಟ ನಡೆಯಿತು. ಇದು ಉತ್ಸುಕತೆಯನ್ನು ತಂದಿತ್ತು. ದಿನಾಂಕ 7–11–97 ರಲ್ಲಿ ಮೇಲಿನ ಗೌಡ ಸಮಾಜದಲ್ಲಿ ಜರುಗಿದ ಕೂಟದ ಅಧ್ಯಕ್ಷತೆಯನ್ನು ವಿದ್ಯಾಸಂಘದ ಅಧ್ಯಕ್ಷರಾದ ಶ್ರೀ ಕೆ. ಕೆ. ಪೂರ್ಣಯ್ಯನವರು ವಹಿಸಿದ್ದು ಜಿಲ್ಲೆಯ ಇತರ ಹಲವು ಸಮಾಜದ ಅಧ್ಯಕ್ಷರುಗಳು ವೇದಿಕೆಯನ್ನು ಅಲಂಕರಿಸಿದ್ದರು. ಎಷ್ಟೋ ವರ್ಷಗಳ ನಮ್ಮ ಗೌಡ ಬಾಂಧವರ ಕನಸನ್ನು ನನಸು ಮಾಡಲು ಇಟ್ಟ ದಿಟ್ಟ ಹೆಜ್ಜೆ ಪ್ರಶಂಸನೀಯವಾದದ್ದು. ಆದರೆ ಗೌಡ ಸಮಾಜಗಳಿಗೆ ಕೇಂದ್ರ ಕಛೇರಿಯಾಗಿರಬೇಕಾದ ಮಡಿಕೇರಿ ಗೌಡ ಸಮಾಜದ ಹಾಲಿ ಅಧ್ಯಕ್ಷರಾದ ತೋಟಂಬೈಲು ಎಂ. ನಾಣಯ್ಯನವರು ಗೈರು ಹಾಜರಿನಲ್ಲಿ ಅಧ್ಯಕ್ಷ ಸ್ಥಾನದಿಂದ ಶ್ರೀ ಪೂರ್ಣಯ್ಯನವರಿಗೆ ಇಡೀ ಗೌಡ ಸಮಾಜಕ್ಕೆ ಅಗತ್ಯವಿರುವ ಸಂಸ್ಕೃತಿ–ಅಭಿವೃದ್ಧಿ ಸಲಹೆಗಳನ್ನು ನಿರ್ಣಯ ರೂಪಕ್ಕೆ ತರುವ ಧರ್ಮಸಂಕಟದ ಪರಿಸ್ಥಿತಿ ತುಂಬಾ ಅನುಕಂಪನೀಯಕರವಾಗಿತ್ತು. ನವಯುವಕರ ಉತ್ಸುಕತೆಯನ್ನು ಕಂಡಾಗ ಕುರ್ಚಿಯ ಆಶೆಯಲ್ಲೇ ನಿರ್ದಾಕ್ಷಣೆಯಲ್ಲಿ ಮುಂದುವರಿಯುತ್ತಿರುವ ಹಿರಿಯರಿಗೆ ವಿರಾಮವಿರಲಿ, ನಾಗರೀಕತೆಯಲ್ಲಿ ಮುಂದುವರಿಯುತ್ತಿರುವ ಇತರ ಜನಾಂಗದವರಂತೆ ನಮ್ಮನ್ನು ಬಾಳಲು ಬಿಡಿ ಎಂಬ ಒಕ್ಕೊರಲು ಕೇಳಿಬರುತ್ತಿತ್ತು. ಈ ಅರ್ಥದಲ್ಲಿ ರಚಿತವಾದ "ಕೊಡಗು ಗೌಡ ಸಾಂಸ್ಕೃತಿಕ ಅಕಾಡಮಿ" ಗೌಡ ಸಮಾಜದ ಅಧ್ಯಕ್ಷರ ಗೈರು ಹಾಜರಿನಲ್ಲಿ ನಡೆದದ್ದು ವಿಷಾದಕರವಲ್ಲವೇ ?

ಶ್ರೀ ನಾಣಯ್ಯನವರಿಗೆ ಆಹ್ವಾನ ಪತ್ರಿಕೆ ತಲಪಿದೆಯೊ ಇಲ್ಲವೊ, ಆದರೆ ವಿದ್ಯಾಸಂಘದ ಗೌರವ ಕಾರ್ಯದರ್ಶಿಯವರೇ ಸ್ವತಃ ಖುದ್ದಾಗಿ ವಿಷಯ ತಿಳಿಸಿದ ಮೇಲೆ ತನ್ನ ಗೈರು ಹಾಜರಿಗೆ ಏನೇ ಕಾರಣಗಳಿದ್ದರೂ ತಮ್ಮ ಸಲಹೆ ಮತ್ತು ಒಮ್ಮತಗಳನ್ನು ಪತ್ರ ಮುಖೇನ ತಿಳಿಸಬಹುದಿತ್ತು. ವಿದ್ಯಾ ಸಂಘಕ್ಕೆ ಚರಿತ್ರೆಯಲ್ಲಿ ಹಿರಿಯ ಸ್ಥಾನವಿರಬಹುದು. ಆದರೆ ಗೌಡ ಸಮಾಜವೆಂಬುದು ಕಾರ್ಯವ್ಯಾಪ್ತಿಯ ದೃಷ್ಟಿಯಲ್ಲಿ ಹಿರಿದು. ವಿದ್ಯಾಸಂಘ ಮತ್ತು ಸಮಾಜದ ಅಧ್ಯಕ್ಷರೊಳಗೆ ಈ ಬಿನ್ನಾಭಿಪ್ರಾಯವೇಕೆ ? ಸಂಸ್ಕೃತಿಯನ್ನು ಬೆಳೆಸುವುದು ಆಳುವ ಮಗುವನ್ನು ಸಂತೈಸುವಂತೆ ಪ್ರಮುಖ ಪಾತ್ರವನ್ನು ವಹಿಸಬೇಕಾದ ನಾಣಯ್ಯನವರು ಹೀಗೆ ಅಸಾಯಕತೆಯನ್ನು ತೋರಿಸಿದರೆ ಗೌಡ ಭಾಂಧವರು ಏನು ನೆನಸಿಕೊಂಡಾರು? ಪರಿಸ್ಥಿತಿ ಹೀಗಾಗಲು ಕಾರಣ ?

"ಕೊಡಗು ಸಂಗಾತಿ" ಓದುಗರ ಆಕಾಂಕ್ಷೆಯನ್ನು ಬದಿಗೊತ್ತಿ ಸಂಪಾದಕರು ಕೈ ಕಟ್ಟಿ ಕೂರುವ ವೇಳೆ ಇದಲ್ಲ. ಪ್ರಶಂಸನೀಯ ರೀತಿಯಲ್ಲಿ ಕಿರಿಯ ವಿದ್ಯಾಸಂಘದ ಚೌಕಟ್ಟಿನೊಳಗೆ ಸಂಸ್ಕೃತಿ ಅಭಿವೃದ್ಧಿಯ ದೃಷ್ಟಿಯಲ್ಲಿ ಕಟ್ಟಿರುವ ಈ ಕೊ. ಗೌ. ಸಾಂಸ್ಕೃತಿಕ ಅಕಾಡಮಿಯು ಮುಂದೆ ಶ್ರೀ ನಾಣಯ್ಯನವರಿಂದ ನಿರೀಕ್ಷಿಸುವಂತಾದರೂ ಏನನ್ನು ? ಅಥವಾ ಅವರೇ ಈ ಅಭಿವೃದ್ಧಿ ಶೀಲಾ ಕಾರ್ಯಕ್ರಮಗಳನ್ನು ಹಿಂದೆಯೂ ನಿರ್ಲಕ್ಷಿಸಿಕೊಂಡು ಬಂದಿರಬಹುದೆ ಎಂದು ಉದ್ಭವವಾಗುವ ಸಂಶಯಗಳ ಮಧ್ಯೆ ರಚಿತವಾಗಿರುವ ಸಮಿತಿ ಒಂದು ರೀತಿಯಲ್ಲಿ ಶುಭಸೂಚಕವೆಂದು ಭಾವಿಸುವ ವಿಷಯದ ತೀರ್ಮಾನ ಓದುಗರ ಪಾಲಿಗೆ ಬಿಟ್ಟಿದೆ.

● **ಬೈತಡ್ಕ ಬೆಳ್ಯಪ್ಪ,** ಮಡಿಕೇರಿ.

ಓದುಗರಲ್ಲಿ ವಿನಂತಿ

ಓದುಗರು ಸಾಕಷ್ಟು ಪತ್ರಿಕೆಯ ಸದಸ್ಯರಾಗಿದ್ದೀರಿ. ಪತ್ರಿಕೆ ಹೋಗುತ್ತಲಿದೆ. ಉತ್ತಮ ಸ್ಪಂದನವಾಗಿದೆ. ಇನ್ನು ಸಾಕಷ್ಟು ಜನರಿಗೆ ಪತ್ರಿಕೆ ಹೋಗುತ್ತಲಿದೆ. ನೀವು ಕೋರದಿದ್ದರೂ ನಿಮ್ಮ ಹಿತಚಿಂತಕರು ಕೊಟ್ಟ ವಿಳಾಸದ ಮೇರೆ "ಸಂಗಾತಿ ಪತ್ರಿಕೆ"ಯನ್ನು ಕಳುಹಿಸುತ್ತಿದ್ದೇವೆ. ಕಾರಣಾಂತರದಿಂದ ಚಂದಾ ಹಣವನ್ನು ಕಳುಹಿಸದೆ ಇದ್ದವರು ಶೀಘ್ರವಾಗಿ M/o ಮಾಡಿ, ದುಸ್ತರವಾದ ಈ ಪತ್ರಿಕಾ ಬೆಳವಣಿಗೆಗೆ ಸಹಕರಿಸಬೇಕಾಗಿ ತಮ್ಮಲ್ಲಿ ಕಳಕಳಿಯ ಪ್ರಾರ್ಥನೆ.

—**ವ್ಯವಸ್ಥಾಪಕರು**

ಸೂಚನೆ

ಪ್ರಿಯ ಓದುಗರೇ,

ಕೋಟಿ ಮನೆ ಶಿವಯ್ಯ ಮನೋಹರ ಇವರು ಇದುವರೆಗೆ ಕೊಡಗು ಜಿಲ್ಲೆಯ ನಮ್ಮ ಪತ್ರಿಕೆಯ ಕಾರ್ಯ ನಿರ್ವಾಹಕರಾಗಿ ಕೆಲಸ ಮಾಡುತ್ತಿದ್ದರು. ಇವರ ಮೂಲಕ ಯಾರಾದರು ಚಂದದಾರರಾಗಿ, ಪತ್ರಿಕೆಯು ಬಾರದೆ ಇದ್ದು, ರಶೀತಿ ಸಿಕ್ಕದೆ ಇದ್ದಂತಹ ಪ್ರಿಯ ಓದುಗರು ನಮ್ಮನ್ನು ಸಂಪರ್ಕಿಸುವಂತೆಯೂ, ಇನ್ನು ಮುಂದೆ ಓದುಗರು ಇವರ ಜೊತೆಯಲ್ಲಿ ಯಾವುದೇ ವ್ಯವಹಾರ ಮಾಡಬಾರದೆಂಬುದಾಗಿ ಈ ಮೂಲಕ ತಿಳಿಯಪಡಿಸುತ್ತೇವೆ.

—**ಸಂಪಾದಕರು**

ನಿಮ್ಮ ಪತ್ರಗಳು

ಅಭಿನಂದನೆ

ಮಾನ್ಯರೆ,

ಬಿ. ಆರ್. ಜೋಯಪ್ಪನವರ "ಓದಿಕೆ ಕುದ್ದಲ್ಲಿ ಮಕ್ಕಳ ಜಗಳ", ದೇವಜನ ರಮಣಿಯವರ "ದೆವ್ವ ಹಿಡ್ಡ್ ಗದ್ದಳ ತಿಂದ ನೆಂಟ" ಮತ್ತೆ ಡಿ.ಜೆ. ವನಜಾಕ್ಷಿಯವರ ಹಾಸ್ಯ ಬರಹ ತುಂಬಾ ಲಾಯ್ಕ ಇತ್ತ್. ಅರೆಭಾಷಿಕ ವಿಭಾಗನ ಇನ್ನ್ ಹೆಚ್ಚಿಸಿ.

○ ವಂದನೆಗಳೊಂದಿಗೆ ಬಿರುಮಣಿನ ಪ್ರವೀಣ, ಮಡೆ

ಪ್ರೋತ್ಸಾಹ ಅಗತ್ಯ

ಮಾನ್ಯರೆ,

"ಕೊಡಗು ಸಂಗಾತಿ" ಪ್ರಾರಂಭವಾಗಿ ಎಂಟು ತಿಂಗಳು ಗಳು ಕಳೆದವು. ತಾವುಗಳು ನಿರಂತರವಾಗಿ ಚಂದದಾರರಾಗದಿದ್ದ ವರಿಗೂ ಸಹ ಪತ್ರಿಕೆಗಳನ್ನು ಕಳುಹಿಸುತ್ತಿದ್ದೀರಿ. ಆದರೂ ನಮ್ಮ ಜನಾಂಗದವರಿಂದ ಪ್ರೋತ್ಸಾಹ ಕಂಡುಬರುತಿಲ್ಲ. ಆದ್ದರಿಂದ ತಾವುಗಳು ಚಂದದಾರರಿಗೆ ಮಾತ್ರ ಕಳುಹಿಸಿದರೆ ಒಳಿತು. ಇದರಿಂದ ತಮ್ಮ ಮುದ್ರಣ ವೆಚ್ಚ, ಶ್ರಮ ವ್ಯರ್ಥ ಆಗದೆಂದು ನನ್ನ ಅನಿಸಿಕೆ. ನಿಮ್ಮ ತಾಳ್ಮೆ, ಪರಿಶ್ರಮ ಮೆಚ್ಚುವಂತದ್ದೆ.

○ ಕಲ್ಲುಮುಟ್ಲು ಬಸಪ್ಪ, ಬೆಂಗಳೂರು.

ಚಿರವಾಗಿರಲಿ

ಮಾನ್ಯರೆ,

ಇಂದು ನಮ್ಮ ಅರೆಭಾಷೆ, ಸಂಸ್ಕೃತಿಯು ಮೂಲೆಗುಂಪಾಗುವ ಸ್ಥಿತಿಯಲ್ಲಿದೆ. ಈಗಿನ ಯುವ ಪೀಳಿಗೆಯವರಿಗಂತೂ ಇದರ ಗಂಧವೇ ಇಲ್ಲ. ಕೆಲವರಿಗೆ ಅರೆಭಾಷೆ ತಿಳಿದಿದ್ದರೂ ಅದನ್ನು ಮಾತನಾಡಿದರೆ ತಮ್ಮ ಗೌರವಕ್ಕೆ ಎಲ್ಲಿ ಧಕ್ಕೆ ಬರುವುದೋ ಎಂಬಂತೆ ವರ್ತಿಸುತ್ತಾರೆ. ಇಂತಹ ಸಂದರ್ಭದಲ್ಲಿ ಗೌಡ ಜನರಲ್ಲಿ ಪ್ರಜ್ಞೆಯನ್ನು ಮೂಡಿಸಲು ಹಾಗೂ ಗೌಡರ ಭಾಷೆ, ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಗುರಿ ಹೊತ್ತು ಈಗ ತಾನೆ ಬೆಳೆಯುತ್ತಿರುವ "ಕೊಡಗು ಸಂಗಾತಿ"ಗೆ ವಂದನೆಗಳು. ಇದು ತನ್ನ ಹೆಜ್ಜೆಯನ್ನು ಹಿಂದಿಡದೆ, ಪ್ರತಿಯೊಬ್ಬ ಗೌಡರ ಮನೆಮನೆಗಳಲ್ಲಿ ಬೆಳಗಲಿ ಎಂದು ಹಾರೈಸುವೆ.

○ ಪಡಿಕಲ್ ಪುಷ್ಪ ಮಾಚಯ್ಯ, ಬೆಂಗಳೂರು.

ಸಂಗಾತಿಗೆ ಕಾಣಿಕೆ

ಮಾನ್ಯರೆ,

ನಿಮ್ಮ ಪಾಕ್ಷಿಕ "ಕೊಡಗು ಸಂಗಾತಿ"ಗೆ ನನ್ನ ಪುಟ್ಟ ಕಾಣಿಕೆಯಾಗಿ 30 ಡಾಲರ್ ಕಳಿಸೋಳೆ. ನಾನ್ ಕೊಡಗಿಗೆ ಬಾಕನ ಸಂಗಾತಿಯ ಮಹಾ ಪೋಷಕನಾಗಿ ನನ್ನ ಕಾಣಿಕೆನ ಕೊಟ್ಟೆ.

ಸಂಗಾತಿ ದಿನಂದ ದಿನಕ್ಕೆ ಬೆಳೆತಾ ಬರ್ಲಿಂತ ಶುಭ ಹಾರೈಸಿನೆ.

○ ಹರೀಶ್ ಸುಬ್ರಾಯ ದಂಬೆಕೋಡಿ, ಅಮೇರಿಕ.

ನಮ್ಮ ಭಾಷೆ ಉಳ್ಸದು ಅಗತ್ಯ

ಮಾನ್ಯರೆ,

ಸ್ವಲ್ಪ ವರ್ಷದ ಹಿಂದೆ ನಮ್ಮೂರಂವ ಒಬ್ಬ 'ಗೌಡಧ್ವನಿ' ತೇಳಿ ಒಂದ್ ಪೇಪರ್ನ್ ಸ್ವಲ್ಪ ದಿನ ನಡ್ಸಿತ್. ಯಾಕೋ ಏನೋ, ಆ ಪೇಪರ್ ಲಾಯ್ಕ ಇದ್ರುನೂ ಬೇಗ ಪ್ರಚಾರ ಕಳ್ಕಂಡ್ ಕೊನೇಗೆ ನಿತ್ತೇ ಹೋತು. ನಮ್ಮ ಗೌಡ ಜನಾಂಗ, ನಮ್ಮ ಭಾಷೆನ ಉಳ್ಸಿಕೆತೇಳಿ ಮಾಡ್ತಾ ಇರೋ ನಿಮ್ಮ ಈ ಮಹಾ ಪ್ರಯತ್ನಕ್ಕೆ ಸನ ಜಯ ಸಿಕ್ಕಿತ್ಲೆತೇಳಿ ನಾವು ಇತ್ತೀಚೆಗೆ ಬೆಂಗಳೂರ್‌ನ 'ಕೊಡಗು ಗೌಡ ಸಮಾಜ ಯೂತ್ ಅಸೋಸಿಯೇಷನ್'ನ ಸಾಂಸ್ಕೃತಿಕ ಪ್ರದರ್ಶನ ದಿನದಂದ್ ಮಾಡ್ದ ಅರೆಭಾಷೆ ನಾಟಕಲಿ ನಿಮ್ಮ "ಕೊಡಗು ಸಂಗಾತಿ" ಬಗ್ಗೆ ಸ್ವಲ್ಪ ಪ್ರಚಾರ ಕೊಡುವ ಪ್ರಯತ್ನ ಮಾಡ್ಯೊಳೊ.

"ಕೊಡಗು ಸಂಗಾತಿ" ಎಲ್ಲಾ ಗೌಡರುಗಳ ಸಂಗಾತಿಯಾಗಲಿ ತೇಳಿ ಹಾರೈಸುವ,

○ ಎಡಿಕೇರಿ ಸುದರ್ಶನ್, ಬೆಂಗಳೂರು.
KGSYA–Magazine Committee Member

ವಂದನೆಗಳು

ಮಾನ್ಯರೇ

ನಿಮ್ಮ ಪಾಕ್ಷಿಕ "ಕೊಡಗು ಸಂಗಾತಿ" ನಮ್ಮ ಮನೆಗೆ ಬರುತ್ತಿದೆ. ನಿಮ್ಮ ಉತ್ಸಾಹಕ್ಕಾಗಿ ಪ್ರೋತ್ಸಾಹ ನೀಡಲು ರೂ. 1000/-ಕಳುಹಿಸಿದ್ದೇನೆ. ನಿಮ್ಮಸಾಹಸಕ್ಕೆ ವಂದನೆಗಳು.

○ ಕೋಳಿಬೈಲು ಎ. ಬೆಳ್ಯಪ್ಪ, ಭಾ.ಆ.ಸೇ.
ವ್ಯವಸ್ಥಾಪಕ ನಿರ್ದೇಶಕರು,
KSFC, ಬೆಂಗಳೂರು.

ಅರೆ ಭಾಷಿಕ ವಿಭಾಗ

ಅಪ್ಪಂಗೆ ತರಾ...ಅವ್ವಂಗೆ ಕುರಾ...ನಂಗೆ ಎಮ್ಮೆ ಪಾರಾ

'ಏ ಅಕ್ಕ ಗೂಡೆ..., ಓ ಅಕ್ಕ ಕೂಸು..., ಬೋಜಕ್ಕೀ...' ಹೆಂಗೆ ಕರ್ದರೂ ಆ ಗೂಡೆಗೆ ಗನ್ನೆನೆ ಇಲ್ಲೆ. ಅವುಳು ಮೋಟು ಲಂಗ ಹಾಕ್ಕಂಡ್ ಕೈಲೊಂದ್ ಕೋಲು ಹಿಡ್ಕಂಡ್ ಗಿಡಕ್ಕೆ ಬಡ್ಕಂಡ್ ಪದ ಹೇಳ್ತಾ ಇತ್ತ್. ಎಮ್ಮೆ ಆಚೆ ಕಡೆ ಮೇಯ್ತಾ ಉಟ್ಟ್. ಈ ಗೂಡೆ ಎಮ್ಮೆ ಮೇಯಿಸಿಕಂಡ್ ಯಂತ ಹೇಳ್ತಾ ಉಟ್ಟುತ ದೊಡ್ಡಪ್ಪ ಕಿವಿಕೊಟ್ಟ್ ಕೇಳ್ತ್.

ಬಿ. ಆರ್. ಜೋಯಪ್ಪ, ಮದೆ

ಅಗ ಅವ್ಳ "ಅಪ್ಪಂಗೆ ತರಾ...ಅವ್ವಂಗೆ ಕುರಾ...ನಂಗೆ ಎಮ್ಮೆ ಪಾರಾಂತ ರಾಗ ಎಳ್ದ್ ಪದ ಹೇಳ್ತಾ ಇತ್ತ್. ದೊಡಪ್ಪಂಗೆ ಈ ಪದ ಕೇಳಿ ನಗೆ ತಡೆಕೆ ಬೊತ್ತಾತ್. "ಯಂತನೇ ನಿನ್ನ ಪದಾಂತ" ಕೇಳಿಕಂಡ್ ಆ ಗೂಡೆನತ್ರ ಹೋಗಿ ನಿಲ್ಲಕನೇ ಗೊತ್ತ್! ಆಗ ಆ ಗೂಡೆ "ಉಯೀ ದೊಡಪ್ಪಾಂತ" ಕುಸೀಲಿ ಕುಣಾದಾಡ್ತ್. "ನೀ ಯಂತ ಮಾಡ್ದನೆ ಇಲ್ಲಿ? ಒಬ್ಬಳೇ ಪದ ಹೇಳ್ತಾ ಒಳ. ಅಪ್ಪ, ಅವ್ವ ಹೆಂಗೊಳೊತ" ಕೇಳಕನ ಗೂಡೆ ಹೇಳ್ತ್ : ಅಪ್ಪಂಗೆ ತರಾ, ಅವ್ವಂಗೆ ಕುರಾ, ನಂಗೆ ಎಮ್ಮೆ ಪಾರಾ. ಬನ್ನಿ ಮನೆಗೆ ಪೋಯಿಂತ ಹೇಳಿ ಎಮ್ಮೆನ ಹೊಡ್ಕಂಡ್ ಮನೆಕಡೆ ಹೊಟ್ರೋ.

ಬೊಜಕ್ಕಿ ಗೂಡೆಗೆ ಒಂದು ಏಳೆಂಟೊರ್ಷ ವಯಸ್ಸಿದ್ದರ್. ಅವುಳಿಗೆ ಒಬ್ಬ ತಮ್ಮನೂ ಉಟ್ಟ್. ಅಪ್ಪಂಗೆ ಜರ ಬುಟ್ಟ್ ಬುಟ್ಟ್ ಬಾದು. ಅವ್ವಂಗೆ ಎರಡೂ ಕಡೆ ಕುರ ಎದ್ದ್ ಕೂರಿಕೆ ಬೊತ್ತದೆ. ಬೋಜಕ್ಕಿ ಗೂಡೆದ್ ಗೋಳು ನೋಡಿಕೆ ಬೊತ್ತ್.

ಒಂದಿನ ಅಪ್ಪ ಕಳ್ಳ್‌ಕಾಸಿ ಕುಪ್ಪಿಗೆ ತುಂಬಿ ಹುಲ್ಲುಮುಂಡಲಿ ಇಸಿತ್. ಇಸಿ ಕಾಕನ ಮಕ್ಕಳೊಟ್ಟಿಗೆ "ಮಕ್ಕಳೇ ನಾವಿಲ್ಲ ದಿರಕಾಕನ ಕಳ್ ಹಿಡೇಕೆ ಪೊಲೀಸ್‌ಗಿಲೀಸ್ ಬಾವೊ. ಅವು ಬಂದ್ ಕಳ್ ಕುಪ್ಪಿ ಎಲ್ಲಿತ ಕೇಳ್ವೊ. ಆಗ ನೀವು ನಾನ್ ಹುಲ್ಲು ಮುಂಡಲಿ ಇಸಿಯೊಳೆಂತ ಹೇಳ್‌ಬೇಡಿತ ಹೇಳ್ತ್. ಒಮ್ಮೆ ಅಪ್ಪ ಅವ್ವ ಇಬ್ಬರೂ ಎಲ್ಲಿಗೋ ಹೋಗಿದ್ದೋ. ಅದೇ ದಿನ ಕಳ್ ಹಿಡೆಕೆ ಪೊಲೀಸ್‌ನವು ಬರೊಕಾ? ಅವು ಬಂದಂಗೆ ಗಡ್‌ಬಡ್ ಸದ್ ಮಾಡಿ ಕಂಡ್ ಅಲ್ಲಿ ಇಲ್ಲಿ ಹುಡಿಕಿಕೆ ಶುರು ಮಾಡ್ಡೊ. "ಏ ಮಕ್ಕಳೆ ಅಪ್ಪ ಕಳ್ ಕುಪ್ಪಿನ ಇಸುದು ಎಲ್ಲಿಂತ ಜಬರ್‌ದಸ್ತ್ ಮಾಡಿ ಕೇಳ್ದೊ. ಆಗ ಈ ಮಕ್ಕ ಹೇಳ್ದೊ "ನೀವು ಎಲ್ಲಿ ಬೇಕರೆ ಹುಡುಕಿ. ಆದರೆ ಹುಲ್ಲುಮುಂಡಲಿ ಹುಡುಕುದು ಬ್ಯಾಡ. ಅಲ್ಲಿ ಮಾತ್ರ ಕಳ್ ಕುಪ್ಪಿನ ಇಸಿತೇ ಇಲ್ಲೆ."

ಇನ್ ಕೇಳೊಕಾ? ಪೊಲೀಸ್ ನೆಟ್ಟಂಗೆ ಹುಲ್ಲು ಮುಂಡಕ್ಕೆ ಹೋತು. ಅಲ್ಲಿ ಎರಡ್ ಕುಪ್ಪಿ ಸಿಕ್ಕಿತ್. ಈಗ ಏನ್ ಮಾಡ್ದು? ಮಕ್ಕ ಗೋಳೋಂತ ಮರ್ಡಿಕೆ ಶುರು ಮಾಡ್ದೊ. ಪೊಲೀಸಿಗೆ ಏನಾತೊ? ಈ ಮಕ್ಕಳ ಗೋಳಾಟ ನೋಡಿ ಅಯ್ಯೋ ಪಾಪಂತ ಆತ್. ಹೆಂಗಾರ್ ಸಾಯಲಿತ ಹೇಳಿ "ಇನ್ ಮುಂದೆ ಕಳ್‌ಕಾಸಿಕೆ ಬೊತ್ತ್‌ತ ಅಪ್ಪಂಗೆ ಹೇಳೊಕು. ಇನ್ನೊಮ್ಮೆ ಬಾಕನ ಸಿಕ್ಕಿರೆ ಮಾತ್ರ ಕೇಸ್ ಮಾಡದೆ ಬುಡಿಕಿಲೆ." ಹಿಂಗೆ ಹೇಳ್ದ ಪೊಲೀಸ್ನವು ಕುಪ್ಪಿನ ತಕಂಡ್ ಕುಶಿಲಿ ಹೋದೊ.

ಇಂಟ್ರು

ಬಿದ್ದಂಡ ಕಾಳಪ್ಪನಲ್ಲಿ ಕೆಲ್ಸ ಮಾಡಿ ಕಂಡಿದ್ದ ಪೂನಂಗೆ ಒಂದು ಚಾಕ್ರಿಗೆ ಸೇರ ಕುತ ಆಸೆ ಆತ್. ಅವರ ಇವರ ಕಾಲ್ ಹಿಡ್ದ್ ಅರ್ಜಿ ಹಾಕಿ ಹೆಂಗಾರ್ ಫಾರೆಸ್ಟ್ ಆಫೀಸ್‌ಂದ ಇಂಟ್ರು ಬಾತ್. ಟೆಸ್ ಟಾಪಾಗಿ ಪೂನ ಹೊರ್ಟತ್. ಕೊಡ್ಗರಲ್ಲಿ ಕೆಲ್ಸ ಮಾಡಿಕಂಡಿದ್ದಂವ ಅಲಾ! ಕನ್ನಡ ಒಂಚೂರು ಬಾಲೆ. ಇಂಟ್ರು ಸುರಾತ್. ಜನರಲ್ಲಾಗಿ ಒಂದು ಪ್ರಶ್ನೆ ಕೇಳ್ದೊ.

"ಆಮೆಯನ್ನು ಕೊಲ್ಲುವುದು ಹೇಗೆ?" ಪ್ರಶ್ನೆನ ಹೆಂಗಾರ್ ಅರ್ಥ ಮಾಡಿಕಂಡ ಪೂವ ಎದ್ದ್ ನಿತ್ತತ್.

"ಆಮೆರ ಕುಂಡಿಗೆ ತಿತ್ತ್‌ಕೊಳ್ಳಿ ಇಟ್ಟಾಗ ಆಮೆಯು ಮಂಡೆಯನ್ನು ಊಕುತ್ತದೆ. ಹಾಗೆ ಊಕಿದ ಮಂಡೆಗೆ ಕಡ್ಪತ್ತಿ ತೆಗೆದು ಕಡಿದರೆ ಆಮೆಯು ಚಾವ"

ಪೂವ ಅಷ್ಟ್ ಹೇಳಿ ಕುದ್ದ್‌ಕಂತ್. ಪ್ರಶ್ನೆ ಕೇಳ್ದಂವ ಕುದ್ದಂವ ಕುದ್ದಂಗೆ.

● ಎಂ. ಯು. ನಾಗೇಶ್,
ಬೆಟ್ಟತ್ತೂರು.

ಹೆಂಗಿತ್ ?

ಸ್ವಲ್ಪ ದೂರಲಿ ಮನೆಗೆ ನೆಂಟ್ರ ಬಾವರ ನೋಡಿ ಹೆಣ್ ಗಂಡಂಗೆ ನೀವು ನಂಗೆ ಹೊಡ್‌ದಂಗೆ ಮಾಡಿ, ನಾನ್ ಅತ್ತಂಗೆ ಮಾಡ್ನೆ ತ ಹೇಳ್ತ್. ಅಷ್ಟೊತ್ತಿಗೆ ನೆಂಟ್ರ್‌ಗ ಬಂದೇ ಬುಟ್ಟವೆ.

ಗಂಡ ಹೆಣ್ಣ್‌ಗೆ ಹೊಡ್ದಂಗೆ ಮಾಡ್ದೆ ಹೆಣ್ಣ್ ಅತ್ತಂಗೆ ಮಾಡ್ದೆ. ಇವರ ಜಗಳ ನೋಡಿ ಬಂದ ನೆಂಟ್ರ್‌ಗ ಪೊಡನ ಬಾಗ್ಲ್‌ಲಿ ಹೊರಟ್ ಹೋದೇ ತಡ ಗಂಡ ಹೇಳ್ದೆ "ನಾನ್ ಹೊಡ್‌ದಂಗೆ ಮಾಡ್‌ದ್ ಹೆಂಗಿತ್ ?"

ಹೆಣ್ಣ್ ಹೇಳ್‌ದೆ "ನಾನ್ ಅತ್ತಂಗೆ ಮಾಡ್‌ದ್ ಹೆಂಗಿತ್ ?"

ಅಷ್ಟೊತ್ತಿಗೆ ನೆಂಟ್ರ್‌ಗ ಮೂಡನ ಬಾಗ್ಲ್‌ಲಿ ಬಂದ್ "ನಾವ್ ಹೋದಂಗೆ ಮಾಡ್ದ್ ಹೆಂಗಿತ್?" ತ ಕೇಳಿವೆ.

ಕೆ. ಪಿ. ಪೂರ್ಣಿಮ, ಭಾಗಮಂಡಲ

ಅರೆಭಾಷೆನ ಉಳ್ಸಿ

ನಮ್ಮ ಮುಂದಿನ ಪೀಳಿಗೆಯವು ಅರೆ ಭಾಷೆಲಿ ಮಾತಾಡುವಿನಾ? ನಾವ್ಗೆ ಗೊತ್ತಿರುವ, ಈಗ ಸ್ಕೂಲ್‌ಗೆ ಹೋಕಂಡಿರುವ ನಮ್ಮವರ ಹೆಚ್ಚಿನ ಮಕ್ಕಳ ಲೆಕ್ಕಕ್ಕೆ ತಕಂಡ್, ಸ್ವಲ್ಪ ಹೊತ್ತು ಯೋಚನೆ ಮಾಡಿ ಈ ಪ್ರಶ್ನೆಗೆ ಉತ್ತರ ಕೊಟ್ಟರೆ – ಉತ್ತರ "ಇಲ್ಲೆ". ಅಂದರೆ ನಾವು ಚೆಕೆಟ್ ತಕಂಬಕನ ನಮ್ಮ ಅರೆಭಾಷೆನೂ ಟೊತೇಲಿ ಟಿಕೆಟ್ ತಕಂಡದೆ. ಹಿಂಗಾದರೆ ಈ ಭಾಷೆನೂ ಇನ್ ಸ್ವಲ್ಪ ವರ್ಷಲಿ ಮಾಯ ಆದ. "ಅರೆ ಭಾಷೆ ಎನ್ನುವ ಒಂದು ಲ್ಯಾಂಗ್‌ವೇಜನ್ನು ಹಿಂದಿನ ಜನರು ಮಾತನಾಡುತ್ತಿದ್ದರಂತೆ ! ಹೀಂಗೆ ಹೇಳುವ ಪರಿಸ್ಥಿತಿ ಅರೆಭಾಷೆಗೆ ಬರಕಾಗದೂಂತ ಇದ್ದರೆ, ನಾವು ಈಗಲೇ ಏನಾದರೊಂದು ಮಾಡಿಯೇತೀರೊಕು. ಅಲ್ಲದೆ ಅರೆ ಭಾಷೆಗೆ ಯಾಕೆ ಈ ಸ್ಥಿತಿ ಬಾತೂಂತ ನಾವು ತಿಳ್ಕಣಕು.

ಇಂದ್, ಬಡತನ ಇರುವಂಥಲ್ಲಿ ಮಾತ್ರ ನಮ್ಮ ಅರೆಭಾಷೆ, ಸಂಸ್ಕೃತಿ ಉಳ್ಕಂಡುಟ್ಟು. ಶ್ರೀಮಂತರ ಮನೆಲಿ ಇದೆಲ್ಲಾ ನಾಶ ಆಗ್ತಾ ಉಟ್ಟು. ಇದೇ ಮಾತ್ನ ಸಂತ್ಯಾಂಶನ ಕಡ್ಲೇರ ಸುಮ ಮುಂದಪ್ಪ ಈ ಹಿಂದೆನ ಸಂಚಿಕೆಲಿ ಬರ್ದಿದ್ದೊ. ಇದರೊಟ್ಟಿಗೆ ಯಾವ ಮನೆಲೆಲ್ಲಾ ಬೇರೆ ಭಾಷೆ ಮಾತಾಡುವವರ "ಸಂಬಂಧ" ಆವುಟೋ, ಆ ಮನೆಲೆಲ್ಲಾ ನಮ್ಮ ಭಾಷೆ ನಾಶ ಆವುಟೂಂತ ಹೇಳಕ್. ಅಂದರೆ, ಬೇರೆ ಬೇರೆ ಭಾಷೆಯವರ ಮದ್ವೆ ಆದಕ್ಕೆ ಅರೆಭಾಷೆ ನಾಶಾಗಿ ಹೋತ್‌ಂತ ನಾ ಹೇಳ್ವುಲೆ. ಇದ್ಕೆಲ್ಲಾ ನಮ್ಮವರ ಮನೋಭಾವನೇ ಮುಖ್ಯ ಕಾರಣ. "ಕಾಡ್ ಕುರುಬರ ಭಾಷೆನೇ ಅರೆಭಾಷೆ" ತೇಳುವ ಕೆಲವು ಜನಗ, ನಾಡ್ ಒಡ್ದ ಗೌಡ್ರುಗ ಮಾತಾಡುವ ಭಾಷೆನೇ ಅರೆ ಭಾಷೆ" ಅಂತೇಳುವ ಪಟ್ಟಣದ ಬುದ್ಧಿವಂತ ಗೌಡ್ರುಗ ನಮ್ಮವು. ಇನ್ನ್ ಕೆಲವು ನಮ್ಮ ಮಕ್ಕ ಇಂಗ್ಲಿಷ್‌ಲಿ 'ಟಸ್‌ಪುಸ್'ಂತ ಸ್ಟೈಲ್‌ಲಿ ಮಾತಾಡಕುಂತಾದರೆ ನಾವು ಸನ ಇಂಗ್ಲಿಷ್‌ಲಿ ಮಾತಾಡಕೊಂತೇಳ್ವವು ಮತ್ತೆ ಕೆಲವು. ಹೀಂಗೆಲ್ಲ ಹೇಳುವ ನಮ್ಮ ಜನರ್‌ಂದ ಅರೆಭಾಷೆ ನಾಶ ಆಗ್ತುಟ್ಟು.

ಅರೆ ಭಾಷೆ ಎಷ್ಟ್ ಸೊಗಸಾದ ಭಾಷೆ. ಅದರ್ಲಿ ಎಷ್ಟ್ ತಿರುಳುಟ್ಟು. ಓದಿಕೆ ಎಷ್ಟ್ ಕುಶಿ ಆದೇಂತ "ಕೊಡಗು ಸಂಗಾತಿ" ಓದವುಕೆ ಈಗಾಗಲೇ ಗೊತ್ತಾಗಿರ್ದು. ಅರೆ ಭಾಷೆನ ನಾವು ಉಳ್ಸಕು, ನಮ್ಮ ಮಕ್ಕಳಿಗೆಲ್ಲಾ ಕಲ್ಸಕೂಂತ ಹೆಚ್ಚಿನ ನಮ್ಮ ಜನರ ಮನ್ಸ್‌ಲಿ ಉಟ್ಟೇ ಉಟ್ಟು. ಸ್ಕೂಲ್‌ನ ಪ್ರಭಾವ, ಅವು ಇರ್ವ ಪರಿಸರ, ಇದೆಲ್ಲಾ ಕಾರಣಂದ ಅದ್ ಸಾಧ್ಯ ಆಗ್ತಾ ಇರ್‌ಕಿಲೆ. ಅಂತವ್ಕೆ ನನ್ನ ಒಂದ್ ಅನುಭವನ ಹಂಚಿಕಣಿಕೆ ನಾ ಇಷ್ಟ ಪಟ್ಟನೆ. ನನ್ನೂರು ಶ್ರೀಮಂಗಲಲಿ ಒಂದಿಬ್ಬರ್ ಮಲೆಯಾಳಂ ಮಾತಾಡುವವರ ನಂಗೆ ಬುದ್ಧಿ ಬಂದಲ್ಲಿಂದ ಅಂದರೆ ಸುಮಾರ್ ಇಪ್ಪತ್ತೈದ್ ವರ್ಷಂದ ಗೊತ್ತುಟ್ಟು. ಅವರೊಟ್ಟಿಗೆ ಯಾರ್ ಯಾವ ಭಾಷೆಲೇ ಮಾತಾಡಲಿ, ಅವು ಮಾತ್ರ ಮಲೆಯಾಳನೇ ಮಾತಾಡ್ದು. ಹೊಸದಾಗಿ ಬಂದ ಮೂಡ್‌ಸೀಮೆ ಜನಗ ಅವರಕ್ಕಲೆ ವಿಚಿತ್ರ ಮಲೆಯಾಳ ಮಾತಾಡ್ರೂ ಸಹಿಸಿಕಂಡ್ ತಿರ್ಗಿ ಮಲೆಯಾಳಲೇ ಮಾತಾಡ್ತಿದ್ದೊ. ಈಗೀಗ ಮೂಡ್‌ಸೀಮೆ ಜನನೂ ಲ್ಯಾಕ ಮಲೆಯಾಳ ಮಾತಾಡಿಕೆ ಕಲ್ತೊಳೊ. ಇದರ್‌ಂದ ಏನ್ ತಿಳ್ಕಣಕುಂತೇಳ್ರೆ, ಒಂದ್ ಭಾಷೆನ ಜನಕ್ಕೆ ಕಲ್ಸಕೂಂತಿದ್ದರೆ ಆ ಭಾಷೆ ಬುಟ್ಟ್ ಬೇರೆ ಭಾಷೆ ಮಾತಾಡಿಕಾಗದ್. ನಿಮ್ಮ ಮಕ್ಕಳಿಗೆ ಏನಾರ್ ಅರೆಭಾಷೆ ಕಲ್ಸಕೂಂತಿದ್ದರೆ ಆ ಭಾಷೆ ಬುಟ್ಟ್ ಬೇರೆ ಭಾಷೆ ಅವರೊಟ್ಟಿಗೆ ಮಾತಾಡ್ಬಡಿ. ಆಗ ಅವು ವಿಧಿ ಇಲ್ಲದೆ ಕಲ್ತಕಂಡವೆ. ಹಂಗೆ ನಮ್ಮವರ ಜೊತೆ ಅರೆಭಾಷೆ ಬುಟ್ಟ್ ಬೇರೆ ಭಾಷೆ ಮಾತಾಡಿಕಾಗದ್. ಮತ್ತೆ ಅವು ಹಿಂದೆಂದ ಇವಂಗೆ ಇಂಗ್ಲಿಷ್ ಬಾದ್ಲೆ, ಕನ್ನಡ ಬಾದ್ಲೆ, ಅದ್ಕೆ ಅರೆಭಾಷೆಲೇ ತಲೆ ತಿಂದದೆತ ಹೇಳಿಕ್ಯಾಗದ್. ಹಂಗೇನಾರ್ ಹೇಳ್ರೂ ಪರ್ವಾಗಿಲ್ಲೆ. "ನಾಯಿ ಬೊಗಿಳಿರೆ ದೇವಸ್ಥಾನ ಹಾಳಾದ್ಲೆ" ಅಂತ ಒಂದ್‌ಗಾದೆಲುಟ್ಟಲ್ಲ ಹಂಗೆ ತಿಳ್ಕಣಿ. ನಾವೆಲ್ಲ ಹಿಂಗೆ ಮಾಡ್ರೆ ಅರೆಭಾಷೆನ ಮುಂದಿನ ಪೀಳಿಗೆಗೆ ಖಂಡಿತ ಉಳ್ಸಕ್.

ನನ್ನ ಪ್ರೀತಿಯ ಜನಾಂಗ ಭಾಂದವರಲ್ಲಿ ನಾನ್ ಕೇಳಿಕೊಂಬೊದು ಏನೂಂತೇಳ್ರೆ ಅರೆಭಾಷೆನ ಹಿಯ್ಯಾಳ್ಸದು ಬ್ಯಾಡ. ಮಕ್ಕ ಶಾಲೆಲಿ ಯಾವುದೇ ಭಾಷೆಲಿ ಓದಲಿ, ಬರ್ಯಲಿ, ಮನೇಲಿ ಮಾತ್ರ ಅವರೊಟ್ಟಿಗೆ ಅರೆಭಾಷೆನೇ ಮಾತಾಡಿ. ನಮ್ಮವು ಎಲ್ಲಿ ಕಂಡರೂ ಅರೆ ಭಾಷೆಲೇ ಮಾತಾಡಿ, ಅರೆ ಭಾಷೆ ಉಳಿಸಿ. ಇದಿಕ್ಕಾಗಿ ನಾವೆಲ್ಲ ಪಣ ತೋಡುವ.

● **ಹರೀಶ್ ದಂಬೆಕೋಡಿ.**
ಟೆಕ್ಸಸ್, ಅಮೇರಿಕ

ನಗೆ ಹನಿ

ಅಮ್ಮ : ಏ ಕತ್ತೆ ಬಡವಾ, ಇಷ್ಟೊತ್ತು ಓದದೆ, ಬರೆಯದೆ ಯಾವ ಅಯೋಗ್ಯನ ಒಟ್ಟಿಗೆ ಸುತ್ತಾಡಿಕೆ ಹೋಗಿದ್ದ?

ಮಗ : ಪೊಪ್ಪನ ಒಟ್ಟಿಗೆ ಅಮ್ಮ !

● **ಮುಳ್ಳನ ಎಸ್. ವಸಂತ, ಮಡಿಕೇರಿ**

ಈ ಅಜ್ಜಿಕ ಯಾಕೆ ಹಿಂಗೆ ?

'**ಕೋ**ಟ್ ಪ್ಯಾಂಟ್ ಹಾಕಿ ಹೆಂಗೆ ಹೋತಿತ್ತ್ ರಾಟೆ' ಕೈಲಿ ಚರ್ಮೆ ಸೊಪ್ಪು ಹಿಡ್ಕಂಡ್ ಬೊಗ್ಯಂಡ್ ಬೊಗ್ಯಂಡ್ ಒಳಗೆ ಬಾತ್ ಅಜ್ಜಿ. ನಾನೊವ್ಮೆ ತಲೆ ಎತ್ತಿ ನೋಡಿ ಪುನಃ ಪಣ್‌ಪುಳಿ ಕೊಯ್ಯಕೆ ಸುರುಮಾಡ್ದೆ. ಅಂತು ತಡಿಯದೆ ಕೇಳ್ದೆ "ಯಾರವ್ವ". ನಂಗೆ ಗೊತ್ತುಟು ಅಜ್ಜಿ ಬಾಯಲಿ ಒಳ್ಳೆದ್ ತೇಳಿ ಬಾದುಲೆ ತ.

ಎಂ. ಆರ್. ಶಾಂತಿರಾಜ ಬೆಟ್ಟತ್ತೂರು

"ಅದೇ ಆ ಸೂಳೆ ಉಟ್ಟಲ್ಲ. ಮೂಲೆ ಮನೆ ಜೋತಿಗೂಡೆ." ನಿನ್ನ ಮಡ್ಗಕತಾ ಗೇನ ಮಾಡ್ದೆ ನಾನ್. ಅದೇ ಮೈಸೂರ್‌ಲಿರುವ ಪಿಳ್ಳಿ ಚೂಡಿ ಹಾಕ್ಕಂಡ್ ಬಂದ್ರೆ ಯಾಗವ್ವ ತೈದದ್. ಎಷ್ಟ್ ಕೊಟ್ಟ. ನೆಸೆ ಕಲರ್ ಆಗಿದ್ದರೆ ನಿನ್ನ ಮೊಕಕೆ ಲಾಯ್ಕ ಕಂಡಿರ್ದು ತೇಳುವ ಅಜ್ಜಿಗೆ ನಾನ್ ಏನ್‌ತ ಹೇಳಕು ಹೇಳಿ. ಈ ಅಜ್ಜಿಕ ಯಾಕೆ ಹಿಂಗೆ ?

ಆಚೆ ಮನೆ ಮೀನಕ್ಕ ನೈಟಿ ಹಾಕ್ ವುಟ್ರೆ ಸಾಕ್. "ಆ ಸುಡುಗಾಡ್ ಗೌನು ಹಾಕ್ಕಂಡ್, ಹೆಂಗೆ ಸೋಬಾನೆ ಹೇಳಿಕಂಡ್ ಕುದುರೆ ಕುದುರೆ ಹೋದಂಗೆ ಹ್ಯಾದೆ" ತೇಳ್ಟ್. ಅದೇ ಸೂರ್ತಲಿಗೆ ಕೊಟ್ಟ ಮಗಳು ಬಂದ್ ಸೀರೆ ಬಿಚ್ಚಿ ನೈಟಿ ಹಾಕ್ಕಂತ್ರೆ–'ಈ ಗೌನು ಹಾಕ್ಕಂಡ್ರೆ ಕೆಲ್ಸ ಮಾಡಿಕೆ ಬಾರಿ ಒಳ್ಳೆದ್ ಅಲ್ಲವಾ" ತೇಳ್ಟ್. ನಮ್ಮ ಅಮ್ಮ ಎಲ್ಲಾರ್ ನಮಿಗೆ ಬೈದರೆ ಸಾಕ್ ಅಜ್ಜಿದ್ ಸುರಾತ್ 'ಸುರುಮಾಡ್ತ್ ಸಡು ಸುಡು ಸಡುಸುಡುತ. ಈ ಮುದಿ ಯಾಗ ಸಾಯದುತ ಅವುಟೇನೊ' ತೇಳಿ ಮಣ ಮಣ ಮುತ್ರ ಹಾಕ್ತಿತ್ತ್.

ಒವ್ಮೆ ಹಿಂಗೆ ಇರ್‌ಕನ ಅಜ್ಜಿಗೆ ಮಡಿಕೇರಿ ಮಗಳ ಮನೆ ಗ್ಯಾನಾತೊ ಏನೊ. ಮಸರ ಸಮೆ ಬೇರೆ. ಅಜ್ಜಿಗೆ ತಲೆಬೇನೆ ಜೋರಾತ್. 'ಅಯ್ಯೋ ಉಯ್ಯೋ, ನನ್ನ ನೋಡವು ಇಲ್ಲೆ, ನಂಗೆ ಯಾಕೆ ಈ ರ್‍ಯಾಗ ಹಿಡ್ತಪ, ನಾನ್ ಸತ್ತ್ರೋನ್ಯೊ. ಮಕ್ಕಾರ್ ಬಂದಿದರೆ ನೋಡಿಕಂತಿದ್ದೆ ಅಯ್ಯೊ' ತೇಳಿಕೆ ಸುರು ಮಾಡ್ತ್. ನಾನ್ ಅಮ್ಮಂಗೆ ಹೇಳ್ದೆ. ಅಜ್ಜಿ ಎಂತೋ ನ್ಯಾಸನ ತಾಳಿಕೆ ಸುರುಮಾಡ್ತ್ ತ. ಅಮ್ಮ ಹೇಳ್ತ್ ಮಗಳ ಮನೆ ಗ್ಯಾನ ಹತ್ತಿರ್ದು ತ. ಇನ್ನ್ ಎಂತ ಸಾಯದುತ ಪೋಯವ್ವ ಆಸ್ಪತ್ರೆಗೆ ತೇಳ್ದೆ. 'ಹಯ್ಯೊ ನಂಗೆ ಸಾಯಕಾಲಕ್ಕೆ ಆಸ್ಪತ್ರೆ ಬೇರೆ ಕೇಡ್, ಸುಮ್ಮನಾರ್ ಹಿಡ್ಕಂಡ್ ಕುತ್ತಿನೆ. ನಾನ್ ಅಷ್ಟಕ್ಕೆ ಇರ್ದು, ಸತ್ತರೆ ಇಲ್ಲೆ ಸತ್ತನ್ನೆಪ್ಪ, ಪೊಪ್ಪ ಎಲ್ಲಿ?' ತೇಳ್ತ್. ಸಾಯಲವ್ವ ನೀನ್ ರಾಧತ್ತೆನತ್ರ ಸ್ವಲ್ಪ ದಿನ ಇರ್. ಹೊರ್‌ಡ್ ತೇಳ್ದೆ. 'ಅಯ್ಯೋ ಅನ್‌ಕೊಂದ್ ನರ್ಕಕ್ಕೆ ತೇಳಿಕಂಡ್ ನೆಲಕೆ ಕೈಕೊಟ್ಟ್ ಎದ್ದತ್. ಹಾಗೆ ಹಿಂಗೆ ತೇಳಿ ಹೊರ್ಟತ್ ಅಜ್ಜಿ. ಹೊತಾರೆ ಇಜಯಾ ಬಸ್ ಹತ್ತಿದೊ. ಬಸ್ ಬೇರೆ ರಷ್. ಅಜ್ಜಿಗೊಂದ್ ಸೀಟ್ ಮಾಡಿ ನಾನ್ ಹಿಂದೆ ಹೆಂಗಾರ್ ಸೀಟ್ ಮಾಡಿ ಕುದ್ಟ್‌ಕಂಡೆ. ಸಲ್ಪದೂರ ಹೋಕನ ಅಜ್ಜಿಗೇನಾತೊ. ಎದ್ದ್ ನಿತ್ತ್ ತಿರ್‌ಗಿ ನನ್ನ ನೋಡಿಕೆ ಸುರುಮಾಡ್ತ್. ಅಷ್ಟೆ ಬೇಕಾದ್ ಒಂದ್ ಹೆಂಗ್ಸ್ ಕುದ್ಬೇಬುಡ್ತ್. ನಿನ್ನ ದೊಂಡೆ ಕಟ್ಟ ಎಲ್ಲಿ ಸತ್ತ್‌ಕಂಡಿದ್ದ ತೇಳ್ಯಾಕನ ನಾನ್ ಬೇಗ ಒಬ್ಬನ್ನೊಟ್ಟಿಗೆ ಸೀಟ್ ಇಸ್ಸಿಕಂಕೆ ಹೇಳಿ ಅಜ್ಜಿನ ಹೆಂಗಾರ್ ಹಿಂದಕ್ಕೆ ಎಕ್ಕಬಂದ್ ನನ್ನ ಸೀಟ್‌ಲಿ ಅದರ ಕೂರ್ಸಿ ಸದ್ದಿಲ್ಲದೆ ಕುಮ್ರ ತೇಳಿ ನಾ ನಿತ್ತ್‌ಕಂಡೆ. ಟೋಲ್‌ಗೇಟ್ ಹತ್ರ ಬಾಕನ ಅಜ್ಜಿ ಒವ್ಮೆಗೆ 'ಓ ಕಂಡಕ್ಟಣ್ಣಾ, ಒವ್ಮೆ ಸೀಪುಳು ಹಾಕಿತ.' ನಂಗೆ ನಾಚಿಕಾಗಿ ಬೊತ್ತ್. ಅಜ್ಜಿನ ಕಣ್ ನೋಡ್ದೆ. ನೀ ಎಂತ ನನ್ನ ನೋಡ್ತು. ಅಂವ ಬುಟ್ಟ್ ಕಂಡ್ ಸೀದ ಹ್ಯಾದೆ ನೋಡು, ಸಾಯಕು ನೀನ್ ತೇಳ್ತ್. ಹೆಂಗಾರ್ ಸಾಯಿತೇಳಿ ಸುಮ್ಮನಾಕಂಡೆ. ಅಂತು ಬಸ್ಸಂದ ಇಳ್ಸಿ ಡಾಕ್ಟ್ರಹತ್ರ ಕರ್ಕಂಡ್ ಹೋದೆ. ಅಲ್ಲಿಯೂ ಸಲ್ಪ ರಷ್. ಕುದ್ದುಕಂಡೊ. ಈ ಅಜ್ಜಿ ಸುಮ್ಮನೆ ಕೂರಕಲಾ. ನೀವ್ ಯಾರ ಮನೆ ಅಕ್ಕ, ನೀನ್ ಯಾರ ಮನೆನ್ವ, ಕೂಸ್‌ಗೆ ಎಷ್ಟ್ ತಿಂಗಾತ್, ಅಂವ ನಿನ್ನ ಗಂಡನ 'ತೇಳಿಕಂಡ್ ತಿರ್‌ಗಿಕೆ ಸುರುಮಾಡ್ತ್. ನಾನಂತು ಹಲ್ಲ್ ಕಚ್ಚಿಕಂಡ್ ಇದ್ದ್ ಹೆಂಗಾರ್ ಡಾಕ್ಟ್ರ ಹತ್ರ ಕರ್ಕಂಡ್ ಹೋದೆ. ಒಳಗೆ ಹೋದೆ ಹೋದ್, ನಂಗೆ ಕುತ್ತ್‌ಬಡಿ ಅಣ್ಣಾ ತೇಳ್ತ್. ಡಾಕ್ಟ್ರ ನಗಾಡಿಕಂಡ್ 'ಇಲ್ಲಮ್ಮ ಏನಾಗಿದೆ ನಿಮಗೆ' ತ ಕೇಳ್ತ್. ಸುರು ಮಾಡ್ತಲ್ಲ 'ಅಯ್ಯೋ ತಲೆ ಬೇನೆ ಬೇರೆ, ಮೈ ಕೈ ಬೇನೆ, ಹೊಟ್ಟೆ ಉರಿ, ಕೈಕಾಲ್ ಎಳಿಯದು, ನಾಲಿಗೆ ಉರಿ, ಕಣ್ಣ್ ಉರಿ, ಸೊಂಟ ಹಿಡ್ಕಂಬದು ತೇಳಿ. ಇವರ ಕೇಳಿ ಡಾಕ್ಟ್ರ ಕೇಳ್ತ್ 'ಊಟ ಸೇರುತ್ತದ'? ತ. ಎರಡ್ ರೊಟ್ಟಿ ಎರಡ್ ಸಡೆ ಅನ್ನ ತಿಂದನೆ ತೇಳ್ತ್. ನಾನ್ ಸೀದ ಹೊರಗೆ ಬಂದೆ. ಸ್ವಲ್ಪ ಹೊತ್ತಿಗೆ ಅಜ್ಜಿ ಹೊರಗೆ ಬಾತ್. ಬಿಲ್ ಕೊಟ್ಟ್ ಹೊರಡ್‌ಕನ ಎಂತಾರ್ ತಿಂಬಕಾಯ್ತ್ ನೆ, ಹೊಟ್ಟೆ ಹಿಸ್ಸಿ ಬೊತ್ತ್ ತೇಳ್ತ್. ಈಗ ಯಾವ ಕಾಯಿಲೆ ಇಲ್ಲೆ ನಿಂಗೆ ತಗೇನ ಮಾಡ್ದೆ. ಪೋಯಿ ಹೊಟೇಲಿಗೆ ತ ಕರ್ಕಂಡ್ ಹೋದೆ. ಹೋಗಿ ಮ್ಯಾನೆಜರ್ ಎದ್‌ರ ಕುದ್ದತ್ ನೋಡಿ. ನಾನ್ ಕುದ್ದೆ. ಎಂತ ಮಾಡ್ತು ಹೇಳಿ. ಅನ್ನ ಪ್ಲೇಟ್ ಬಂದದೆ ಬಂದದ್, ಪೂರಿ ಎರಡ್ ಆಗೆಕಾದುಲೆ ತೇಳಿ ಕರೆಗೆ ತೆಯ್ದ್ಸಿ ತೀರ ಒಂದೇ ಮಾಡಿ ಸೊರೊ ಸೋರೊ ತೇಳಿ ತಿಂಬಕೆ ಸುರು ಮಾಡ್ತ್ ಕೈ ತೀರ ಅರ್ಸಿ

ಕಂಡ್. ನಾನ್ ಬುಟ್ಟ ಬಾಯಿ ಬುಟ್ಟಂಗೆ ಕುದ್ದೆ. ನಿಂಗೆ ಬ್ಯಾಡನೆ ತೇಳಿ ನಂದೂ ಎಳಿಯಕೆ ನೋಡ್‌ಕನ ನಂಗೆ ಎಚ್ಚರಾತ್. ಬೇಗ ಬೇಗ ತಿಂದೆ. ಆ ಮೊಸರು ಬೇಡ ದಿದ್ರೆ ಕೊಡು ತೇಳ್ತ್. ನಂಗೆ ಒಂದು ಕಡೆ ನಾಚಿಕೆ ಆಗಿ ಮಾನೇಜರ್ ಕಡೆ ನೋಡಿರೆ ಅಂವ ನಮ್ಮನೆ ನೋಡ್‌ತ್ತಿತ್ತ್. ಈ ಅಜ್ಜಿ ಬಾಕಿ ಇದ್ದ ಎರಡ್ ಪೂರಿನ ನಾಳೆ ಪಿಳ್ಳೆ ಬಂದದೆ ತೇಳಿ ಚೊವುಕಲಿ ಲಾಯ್ಕ ಸುತ್ತಿಕಂತ್. ನಾನ್ ಎದ್ದೇ ಬುಟ್ಟೆ. ಬಿಲ್ಲ್ ಕೊಡುಕನ ಅಜ್ಜಿ ಪುನಃ ಕುದ್ದಲ್ಲಿಂದ ಚೌಕಲಿ ಬಾಯಿ ಉಜ್ಜಿಕಂಡ್ ಏವ ಇಂದ ಹೊಸೆಪ್ಪು ಇಲ್ಲದೆ ನಂಗೆಹುಚ್ಚು ಹಿಡ್ದಂಗೆ ಆ ವು ಟು ತಂಬ. ಅಮ್ಮ ಯಾರಾರ್ ಬಂದರೆ ಗೆಂಡೆ ನೀರುಳ್ಳಿ ಒಂದು ಇಲ್ಲೇ ತೇಳ್‌ತಿತ್ತ್. ನಿನ್ನೆ ಪೊಪ್ಪಂಗೆ ಎರಡ್ ಕಟ್ ಬೀಡಿ ಹಿಡ್ಕವ ಒಂದು ಕಮ್ಮಿ ರೇಟ್‌ದ್ ಹಮಾಂ ಸೋಪು ತಕ. ಯಾರಾರ್ ಬಂದ್ರೆ ಸೋಪು ಇಲ್ಲೆ ಒಂದು ಇಲ್ಲೆ ತ ಇಡೀ ಹೋಟೆಲಿಗೆ ಕೇಳು ವಂಗೆ ಹೇಳಿಕೆ ಸುರು ಮಾಡ್ತ್. ಅದ್ ದೊಡ್ಡ ಹೋಟೆಲ್ ಬೇರೆ. ನಂಗೆ ಸತ್ತ್ ಬುಟ್ಟಂಗೆ ಆತ್.ಅಜ್ಜಿನ ಬ್ಯಾಗ ಎಳ್ಕಂಡ್ ರಾಧತ್ತೆನ ಮನೆ ಕಡೆ ಹೊರ್‍ಟೆ. ಅಂತೂ ಅಜ್ಜಿ 'ಹಂಗೆ ಹೋದುನೆ ಮಕ್ಕಳಿಗೆ ಎಂತಾರ್ ತರಕಾಯಿತ್ ತೇಳ್ತ್. ಅದ್ ತಕಂಡೆ ರಾಧತ್ತೆನಲ್ಲಿ ತಕೊಂಡೋಗಿ ಕುಕ್ಕಿ ವುಟ್ಟ್ ಬದುಕಿದ ಬಡ ಜೀವ ತ ಗೇನ ಮಾಡಿ ರಾಪು ಬಸ್ ಹತ್ತಿದೆ. ನಿಮ್ಮಲ್ಲಿ ಯಾರಾರ್ ಒಳ ಇಂತವು ಇದ್ದರೆ ನನ್ನಂಗೆ ಸುಧಾರ್ಸಿಕಣಿಪ್ಪ.

[ಹೆಸರುಗಳು ಕಾಲ್ಪನಿಕ]

ಎಂ. ಆರ್. ಶಾಂತಿರಾಜ ಬೆಟ್ಟತ್ತೂರು

ನಮ್ಮವು ಮುಂದೆ ಬಾಕೆ ಸಾಧ್ಯ ಇಲ್ಲೆ

ಗೌಡ ಒಬ್ಬ ಓಟೆಗೆ ನಿತ್ತತ್
ಗೌಡ ಜನಾಂಗ ಮುಂದೆ ಬರೆಕುತ್ತೇಳಿ
ಹಾಂಗೆ ಹೀಂಗೆ ಭಾಷಣ ಮಾಡ್ತ್
ನಮ್ಮಲ್ಲೆಲ್ಲ ಒಗ್ಗಟು ಇರಕುತ್ತೇಳಿ
ಬ್ಯಾರವ ಓಟುಲೆ ಗೆದ್ದ್ ಬಾತ್ ॥

ನಮ್ಮಲೆಲ್ಲಿ ಒಗ್ಗಟ್ಟ್ ಒಡ್ತ್
ನಾವುಗೆ ನಾವೇ ಮೋಸ ಮಾಡ್ದೊ
ಆವರ ಕೂಲಿ ನಾವೇ ಮಾಡ್ವೊ
ಇನ್ನೊಬ್ಬರ ನಾವು ಮುಂದೆ ಮಾಡ್ದೊ
ನಾವು ಹೇಂಗೆ ಮುಂದೆ ಬಾದು ॥

ಅರ್ಜಿ ಕೊಟ್ಟ್ ಸರ್ಕಾರಂದ ದುಡ್ಡು ತಂದ್
ತೋಡುಗೆ ಒಂದು ಪಾಲ ಆತ್
ಪಾಲಲಿ ಯಾರ್ ಹೋಗದಾಂಗೆ ಆತ್
ಕೆಲಸ ಎಲ್ಲ ವ್ಯರ್ಥ ಆತ್
ಇನ್ನೊಬ್ಬರಿಗೆ ನ್ಯೆಗಾಡಿಕೆ ಲಾಯಿಕ ಆತ್ ॥

ಅಪ್ಪ ಮಾಡ್ದ ಅಲ್ಪ ಸ್ವಲ್ಪ ಆಸ್ತಿ ಇತ್ತ್
ಇದ್ದ ಆಸ್ತಿ ಮಾರಿ ಹೋದರು ಚಿಂತೆ ಇಲ್ಲೆ
ಎಷ್ಟು ದುಡ್ಡು ಹೋದರು ಪರ್ವಾಗಿಲ್ಲೆ
ಅವನ ನಾ ಬುಡುಕಿಲ್ಲೆತ್ತ ಹಟ ಸಾಧಿಸಿವೆ
ನಾವು ಹೇಂಗೆ ಮುಂದೆ ಬಾದು ॥

ನಾವು ಯಾರಿಗೆ ಕಮ್ಮಿ ಇಲ್ಲೆ
ಮತ್ತ್ಯಾಕೆ ಹಿಂಗೆ ಇಲ್ಲೆ ಇರೋಕು
ಯಾರಿಗೆ ನಾವು ಹೆದರುಕುತ್ತಿಲ್ಲೆ
ನಾವು ತೇಳ್ದು ನಮ್ಮಲ್ಲಿದ್ದರೆ
ಮುಂದೆ ಬಾಕೆ ತೊಂದರಿಲ್ಲೆ !

○ **ಮುಕ್ಕಾಟಿ ಗಣೇಶ್** ಜೆಟ್ಟಿಮಾನಿ

ಸಿಗರೇಟ್ ಸೇದುದರ್‌ಂದ 3 ಲಾಭ ಉಟ್ಟ್

○ ಸಿಗ್‌ರೇಟ್ ಸೇದುದರ್‌ಂದ ಮನೆಗೆ ಕಳ್ಳ ಕಾಕರ್ ಬಾದುಲೆ. ಯಾಕೆ ತ ಹೆಳ್ರೆ ಧೂಮಪಾನ ಮಾಡಿ, ಕೆಮ್ಮುಲು ರೋಗ ಬಂದ ಅವು ರಾತ್ರಿ ಇಡೀ ಕೆಮ್ಮುತ್ತಿದ್ದವೆ, ಆಗ ಕಳ್ಳರ್ ಮನೆವು ಎಚ್ಚರನೇ ಒಳೋ ತೇಳಿ ಅಲ್ಲಿಗೆ ಬಾರದೆ ಬ್ಯಾರೆ ಮನೆ ಕಡೆ ಹೆಜ್ಜೆ ಹಾಕುವೆ.

○ ಸಿಗರೇಟ್ ಸೇದುದರ್‌ಂದ ನಾಯಿಗ ಹತ್ರ ಬಾಲೆ ಯಾಕೆತೇಳ್ರೆ ಧೂಮಪಾನ ಮಾಡಿ ಮಾಡಿ ನಿಶ್ಯಕ್ತರಾದ ಅವರ ಕೈಗೊಂದು ಕೋಲು ಬಂದದೆ ಅದಿಕ್ಕೆ ಅವರ ಹತ್ರ ನಾಯಿಗ ಬಾಕಿಲೆ.

○ ಸಿಗರೇಟ್ ಸೇದುದರ್‌ಂದ ಅವರ ಕೂದ್ಲ್ ಬಿಳಿ ಆಲೆ. ಯಾಕೆತೇಳ್ರೆ ಅವು ಧೂಮಪಾನ ಮಾಡಿ–ಮಾಡಿ, 25, 28 ವರ್ಷಕ್ಕೆ ಗೊಟಕ್ ತೇಳುವೆ. ಅದಿಕ್ಕೆ ಅವರ ಕೂದ್ಲ್ ಬಿಳಿ ಆಲೆ.

○ **ಬಿರುಮುಣ್ಣನ ಪುಷ್ಪಕಲಾ ಪೊನ್ನಪ್ಪ,** ಮದೆ.

K.R.N.N. 240

Printed by M K Thammaiah and Published by Kodagu Sangathi on behalf of Pattada P. Sheelamani and Printed at ASHIRWAD PRINTERS, 180/A, 6th Main, Vinayakanagar, Mysore-12 Published at Mysore, Editor PATTADA. P. SHEELAMANI, 322, Hinkal Village & Post, (Near Aralikatte) Mysore-570017 Phone : 516771